

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 Issue : 31 Wednesday 08-10-2025 E-mail : maruti.b.hosamani76@gmail.com Page: 4 Price : Rs. 1/-


## ಖಾಸಗಿ ಬಸ್ನಲ್ಲಿ ಮಹಿಳಾ ಪತ್ರಕರ್ತೆ ಮೇಲೆ ದುರ್ನಡತೆ, ಕಂಡಕ್ಟರ್ನಿಂದ ಅನುಚಿತ ಸ್ಪರ್ಶದ ಆರೋಪ – ಭಾರತಿ ಮೋಟರ್ಸ್ ಸಂಸ್ಥೆ ವಿರುದ್ಧ ಆಕ್ರೋಶ

**ಸಿಹಿ ಕಹಿ ಸುದ್ದಿ,**

**ಉಡುಪಿ :** ದೇಶಾದ್ಯಂತ ಮಹಿಳೆಯರ ಸುರಕ್ಷತೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿನ ದೌರ್ಜನ್ಯದ ಕುರಿತು ಗಂಭೀರ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ, ಕರ್ನಾಟಕದ ಕರಾವಳಿ ಭಾಗದಲ್ಲಿ ಸಂಚರಿಸುವ ಪ್ರತಿಷ್ಠಿತ ಖಾಸಗಿ ಸಂಸ್ಥೆಯೊಂದರ ಬಸ್ನಲ್ಲಿ ಮಹಿಳಾ ಮಾಧ್ಯಮ ಪ್ರತಿನಿ ಧಿಯೊಬ್ಬರ ಮೇಲೆ ಅನುಚಿತವಾಗಿ ವರ್ತಿಸಿರುವ ಘಟನೆ ಬೆಳಕಿಗೆ ಬಂದಿದೆ. ಈ ಘಟನೆಯು ಭಾರತಿ ಮೋಟರ್ಸ್ ಸಂಸ್ಥೆಯ ಬಸ್ ಸಿಬ್ಬಂದಿಯ ಬೇಜವಾಬ್ದಾರಿ ಮತ್ತು ಉದ್ಧಟತನವನ್ನು ಪ್ರಶ್ನಿಸಿದ್ದು,ರಾಜ್ಯದಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಘಟನೆ ವಿವರಣೆ (ಎಂ–20 ಒಅ 4287 ಬಸ್ನಲ್ಲಿ):

ಘಟನೆಯು ಉಡುಪಿ–ಕುಂದಾಪುರ–ಭಟ್ಕಳ ಮಾರ್ಗದಲ್ಲಿ ಸಂಚರಿಸುತ್ತಿದ್ದ ಎಂ–20 ಒಅ 4287 ಸಂಖ್ಯೆಯ ಭಾರತಿ ಬಸ್ನಲ್ಲಿ ನಡೆದಿದೆ.ಬೆಳಿಗ್ಗೆಸುಮಾರು10:30ಕ್ಕೆಉಡುಪಿ ಕಡೆಗೆ ಚಲಿಸುತ್ತಿದ್ದ ಬಸ್ಸಿನಲ್ಲಿ, ಕಂಡಕ್ಟರ್ ಮಹಿಳಾ ಮಾಧ್ಯಮ ಪ್ರತಿನಿಧಿಯೊಬ್ಬರನ್ನು ಟಿಕೆಟ್ ನೀಡುವ ನೆಪದಲ್ಲಿ ಮೈ ಮುಟ್ಟಿ ಕರೆದಿದ್ದಾರೆ ಎನ್ನಲಾಗಿದೆ.

ಪತ್ರಕರ್ತೆಯ ಪ್ರತಿಭಟನೆ: ಕಂಡಕ್ಟರ್ನ ಈ ನಡವಳಿಕೆಯನ್ನು ಮಾಧ್ಯಮ ಪ್ರತಿನಿಧಿ ತೀವ್ರವಾಗಿ ವಿರೋಧಿಸಿದ್ದಾರೆ. "ನಿಮಗೆ ಬಾಯಿದೆ, ಮೂಗನಲ್ಲ. ಮೈ ಮುಟ್ಟಿ ಕರೆಯುವುದು ಸರಿಯಾದ ಕ್ರಮವಲ್ಲ" ಎಂದು ನೇರವಾಗಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಿಬ್ಬಂದಿಯ ಉದ್ಧಟತನ: ಪ್ರತಿಕ್ರಿಯೆಯಾಗಿ, ಬಸ್ಸಿನ ಡ್ರೈವರ್ ಮತ್ತು ಕಂಡಕ್ಟರ್ ಇಬ್ಬರೂ



ಅತ್ಯಂತ ಉದ್ಧಟತನದ ಮಾತುಗಳನ್ನು ಆಡಿದ್ದಾರೆ. "ಕರೆದರೆ ಏನಾಗುತ್ತದೆ? ನಾವು ಹಾಗೆಯೇ ಮಾಡುವುದು.

ನಿನ್ನ ಬಳಿ ಏನು ಮಾಡಲು ಆಗುತ್ತದೆ, ನಾವು ಮಾಡುವುದೇ ಹಾಗೆ," ಎಂದು ಅವಮಾನಿಸಿದ್ದಾರೆ ಎನ್ನಲಾಗಿದೆ. ಮಾಧ್ಯಮ ಪ್ರತಿನಿಧಿಯು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರೂ, ಸಿಬ್ಬಂದಿಯು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ಅಹಂಕಾರ ಪ್ರದರ್ಶಿಸಿದ್ದಾರೆ.

**ಸಾರ್ವಜನಿಕರ ಪ್ರಶ್ನೆ ಮತ್ತು ಮಾಧ್ಯಮದ ಆಗ್ರಹ:** ಇಷ್ಟು ದೊಡ್ಡ ಪ್ರಮಾಣದಲ್ಲಿ (ಉಡುಪಿ, ಮಂಗಳೂರು, ಭಟ್ಕಳದಿಂದ ಬೆಂಗಳೂರಿಗೂ) ಬಸ್ ಸೇವೆ ಒದಗಿಸುವ ಭಾರತಿ ಮೋಟರ್ಸ್ನಂತಹ ಸಂಸ್ಥೆ ತನ್ನ ಚಾಲಕರು ಮತ್ತು ನಿರ್ವಾಹಕರಿಗೆ ಶಿಸ್ತು ಮತ್ತು ಕ್ರಮಬದ್ಧತೆಯನ್ನು ಕಲಿಸದೆ ಕರ್ತವ್ಯಕ್ಕೆ ನಿಯೋಜಿಸಿರುವುದು ಸರಿಯೇ ಎಂದು ಮಾಧ್ಯಮ ಪ್ರತಿನಿಧಿಗಳು ಈ ಮೂಲಕ ಪ್ರಶ್ನಿಸಿದ್ದಾರೆ.

ಸಾರ್ವಜನಿಕ ವಲಯದಲ್ಲಿ ಈ ಕುರಿತು ತೀವ್ರ ಚರ್ಚೆ ಉಂಟಾಗಿದ್ದು, ಹಲವಾರು ಪ್ರಶ್ನೆಗಳು ಎದುರಾಗಿವೆ:

ಸುರಕ್ಷತೆ ಬಗ್ಗೆ ಕಳವಳ: "ಒಬ್ಬ ಮಾಧ್ಯಮ ಪ್ರತಿನಿಧಿಯೊಂದಿಗೇ ಈ ರೀತಿಯ ದುರ್ನಡತೆ ತೋರಿದರೆ,ಸಾಮಾನ್ಯ ಮಹಿಳಾ ಪ್ರಯಾಣಿಕರ ಪರಿಸ್ಥಿತಿ ಏನಾಗಬಹುದು?" ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಸಂಸ್ಥೆಯ ಬೇಜವಾಬ್ದಾರಿ: "ಈ ಸಂಸ್ಥೆಯು ತನ್ನ ಸಾಮಾಜಿಕ ಜವಾಬ್ದಾರಿಯನ್ನು ಮರೆತಿರುವುದು ಸರಿಯೇ?" ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ನ್ಯಾಯಕ್ಕಾಗಿ ಹೋರಾಟ: ಈಗಾಗಲೇ ಸೌಜನ್ಯಾಳಂತಹ ಪ್ರಕರಣಗಳಲ್ಲಿ ಹೆಣ್ಣುಮಕ್ಕಳಿಗೆ ನ್ಯಾಯ ಸಿಗದೇ ಇರುವ ಪರಿಸ್ಥಿತಿ ಇರುವಾಗ, ಇಂತಹ ಸಂಸ್ಥೆಗಳಲ್ಲಿ ಇಂಥವರನ್ನು ನೇಮಕ ಮಾಡಿ ತೊಂದರೆ ಮಾಡುತ್ತಿರುವುದು ಬೇಸರ ತಂದಿದೆ. ತಮ್ಮ ಮಾನ ಮರ್ಯಾದೆಗೆ ಅಂಜಿ ಹಲವು ಹೆಣ್ಣು ಮಕ್ಕಳು ಇಂತಹ ಕೃತ್ಯಗಳನ್ನು ಪ್ರತಿಭಟಿಸದೆ ಸುಮ್ಮನೆ ಹೋಗುತ್ತಿರಬಹುದು ಎಂದು ಸಹ ಅಭಿಪ್ರಾಯ ವ್ಯಕ್ತವಾಗಿದೆ.

**ಕಾನೂನು ಕ್ರಮಕ್ಕೆ ಆಗ್ರಹ:** ಈ ಹಿನ್ನೆಲೆಯಲ್ಲಿ, ಮಾಧ್ಯಮ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಈ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ ಮತ್ತು ಕೂಡಲೇ ಈ ಬಸ್ನ ಮಾಲೀಕರು, ಚಾಲಕರು ಮತ್ತು ನಿರ್ವಾಹಕರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ.

ಸಾರ್ವಜನಿಕರು ಜಿಲ್ಲಾಡಳಿತಕ್ಕೆ ಎಚ್ಚರಿ–ಕೆ ನೀಡಿ, "ಇಂತಹವರಿಗೆ ಕಡಿವಾಣ ಹಾಕುವುದಾದರೂ ಹೇಗೆ, ಯಾರು?" ಎಂದು ಪ್ರಶ್ನಿಸಿದ್ದು, ಕೂಡಲೇ ಎಚ್ಚೆತ್ತುಕೊಂಡು ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಇಂತಹ ಘಟನೆಗಳಿಂದಾಗಿ, ಭಾರತಿ ಮೋಟರ್ಸ್ನಂತಹ ಸಂಸ್ಥೆಯ ಬಸ್ಸುಗಳನ್ನು ಹತ್ತುವ ಮೊದಲು ಎರಡು ಬಾರಿ ಯೋಚಿಸಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ ಎಂದು ಮಾಧ್ಯಮ ಪ್ರತಿನಿಧಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

**ವರದಿ:ಆರತಿ.ಗಿಳಿಯಾರು.ಉಡುಪಿ**

## ವಿಶ್ವ ಹಿಂದೂ ಪರಿಷತ್ ಸಾಮಾಜಿಕ ಸಾಮರಸ್ಯ ವತಿಯಿಂದ – ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



**ಸಿಹಿ ಕಹಿ ಸುದ್ದಿ,**

**ಆಲಮೇಲ :** ವಿಶ್ವ ಹಿಂದೂ ಪರಿಷತ್ ಸಾಮಾಜಿಕ ಸಾಮರಸ್ಯ ವತಿಯಿಂದ ಆಲಮೇಲ ಪಟ್ಟಣದಲ್ಲಿ ಮಹರ್ಷಿ ಶ್ರೀ ವಾಲ್ಮೀಕಿ ಜಯಂತೋತ್ಸವ ಶ್ರೀರಾಮ ಮಂದಿರದಲ್ಲಿ ಜರುಗಿತು. ಸಾಮಾಜಿಕ ಸಾಮರಸ್ಯದ ಉತ್ತರ ಪ್ರಾಂತದ ಪ್ರಮುಖರಾದ ಶ್ರೀಮಂತ ದುದ್ದಗಿ ಮಾತನಾಡಿ ಮಹಾಕಾವ್ಯ ರಾಮಾಯಣ ರಚಿಸಿದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಯವರಿಗೆ ಸಲ್ಲುತ್ತದೆ. ಗುರು ನಾರದವರ ಆಶೀರ್ವಾದದಿಂದ ಡಕಾಯಿತ ಹೋಗಿ ಶ್ರೀ ರಾಮನ ಭಕ್ತನಾದ ಶ್ರೀ ರಾಮನ ಜಪ ಮಾಡುತ್ತಾ ಮಾಡುತ್ತಾ ಅವರ ಸುತ್ತಲೂ ಹುತ್ತು ಬೆಳೆಯಿತು ಶ್ರೀ ವಾಲ್ಮೀಕಿ ಹುತ್ತದಿಂದ ಹೊರಗೆ ಬಂದರು ಮಹಾನ್ ಋಷಿಗಳು ಕೂಡ ಆದರೂ. ಪ್ರತಿಯೊಬ್ಬ ವ್ಯಕ್ತಿಗಳು. ಸಮಾಜದಲ್ಲಿ ಬದಲಾವಣೆ ಆಗುತ್ತಾ ನಾವು ಕೂಡ ಆದರ್ಶ ವ್ಯಕ್ತಿಗಳಾಗಬೇಕೆಂದು. ಶ್ರೀ ಮಂತ ದುದ್ದಗಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ವಿಶ್ವ ಹಿಂದೂ ಪರಿಷತ್ ತಾಲೂಕ್ ಅಧ್ಯಕ್ಷರಾದ ರಾಜೇಂದ್ರ ರಾಥೋಡ್ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ್ ಅನಂತ್ ಗೋಳ ಉಪಾಧ್ಯಕ್ಷರಾದ ಹೊನ್ನಪ್ಪ ಗುರುಕಾರ್. ಮಲ್ಲಿಕಾರ್ಜುನ್ ರಾಂಪುರಮಠ. ಪಿ.ಟಿ ಪಾಟೀಲ್ ಸದಾಶಿವ ಜಾನ. ಡಾಕ್ಟರ್ ಮಂಜು ಶಿಂದೆ. ಪಂಡಿತ್ ಆಸಂಗಿಹಾಳ. ರಾಮದಾಸ್.ಖಂದಾರೆ ಹಾಗೂ ಹಿರಿಯರು ಕಾರ್ಯಕರ್ತರು ಉಪಸ್ಥಿರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರೇವಣಸಿದ್ದಯ್ಯ. ಜಿ. ಹಿರೇಮಠ ಆಲಮೇಲ**

## ಎಲ್ಲ ಶೋಷಿತರಿಗೂ ಶಿಕ್ಷಣ ದೊರಕಬೇಕು: ನೀಲನಾಯಕ

**ಬಾಗಲಕೋಟ :** 'ಸಮಸಮಾಜ ನಿರ್ಮಾಣ ಆಗಬೇಕೆಂದರೆ ಅಂಬೇಡ್ಕರ್ ಆಶಯದಂತೆ ಎಲ್ಲಾ ಶೋಷಿತರಿಗೂ ಶಿಕ್ಷಣ ದೊರಕಬೇಕು. ದೀಕ್ಷಾಭೂಮಿ ಯಾತ್ರಿಕರು ಪ್ರವಾಸಕ್ಕೆ ಸೀಮಿತವಾಗದೆ ಅಂಬೇಡ್ಕರ್ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಇತರ–ರಿಗೂ ಅರಿವು ಮೂಡಿಸಬೇಕು' ಎಂದು ದಲಿತ ಸಂಘರ್ಷ ಸಮಿತಿ (ಭೀಮ ವಾದ)ರಾಜ್ಯ ಸಂಘಟನಾ ಸಂಚಾಲಕ ಪರಸುರಾಮ ನೀಲನಾಯಕ ಹೇಳಿದರು.



ಸಮಾಜ ಕಲ್ಯಾಣ ಇಲಾಖೆ ವ್ಯವಸ್ಥೆ ಮಾಡಿರುವ ಬಸ್‌ಗಳಲ್ಲಿ ನಾಗಪುರದ ದೀಕ್ಷಾಭೂಮಿಗೆ ಯಾತ್ರೆಬಂದಿರುವಬಾಗಲಕೋಟ ಜಿಲ್ಲೆಯ 350 ಅಂಬೇಡ್ಕರ್ ಅನುಯಾಯಿಗಳನ್ನು ಉದ್ದೇಶಿಸಿ ನಾಗಪುರದಲ್ಲಿ ಅವರು ಮಾತನಾಡಿದರು.

ವಿಶ್ವ ಮೆಚ್ಚುವ ಸಂವಿಧಾನ ರಚಿಸಿರುವ ಅಂಬೇಡ್ಕರ್ ಅವರ ಪಂಚಧಾಮಗಳಲ್ಲಿ ಒಂದಾಗಿರುವ ನಾಗಪುರ ದೀಕ್ಷಾ ಭೂಮಿಯಲ್ಲಿರುವ ಅವರ ವಿಚಾರಧಾರೆಗಳನ್ನು ಯಾತ್ರಿಕರು ಅರಿತುಕೊಳ್ಳಬೇಕು. ವಾಪಸ್ ಹೋದ ಬಳಿಕ ಕನಿಷ್ಠ ತಲಾ 10 ಜನರಿಗೆ ತಲುಪಿಸಬೇಕು ಎಂದು ಹೇಳಿದರು.

ಸಾಕ್ಷರತೆಯಲ್ಲಿ ಕೇರಳ ರಾಜ್ಯ ಮೊದಲಸ್ಥಾನದಲ್ಲಿದ್ದು,ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಶಿಕ್ಷಣ–ಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂಬ ಅಂಬೇಡ್ಕರ್ ವಿಚಾರಗಳನ್ನು ಮನೆ ?ಮನೆಗೆ ಮುಟ್ಟಿಸುವ ಕೆಲಸವನ್ನು ದೀಕ್ಷಾಭೂಮಿ ಯಾತ್ರಾರ್ಥಿಗಳು ಮಾಡಬೇಕು ಎಂದು ತಿಳಿಸಿದರು

ಡಾ.ರವಿ ಪದಗುಣಕಿ ಅವರು ವಿಜಯಪುರ ಜಿಲ್ಲೆಯ ನಿಯೋಗ ನೇತ್ರತ್ವವಹಿಸಿದ್ದರು ?.ಬಾಗಲಕೋಟಯ ಶನಸು ಬಂಡಿ ಮೊದಲಾದವರು ಈ ಸಂದರ್ಬದಲ್ಲಿ ಉಪಸ್ಥಿತರಿದ್ದರು.

## ಪ್ರಾಧಿಕಾರ ಅಧ್ಯಕ್ಷರಾಗಿ ದಾನಪ್ಪ ಹುಲಜತ್ತಿ ಅಧಿಕಾರ ಸ್ವೀಕಾರ

**ರಬಕವಿ–ಬನಹಟ್ಟಿ :** ಪ್ರಾಮಾಣಿಕತೆಯಿಂದ ಜಾತಿ, ಪಕ್ಷ ಬೇದವಿಲ್ಲದೆ ಸಾಮಾನ್ಯ ಜನತೆಗೂ ಸರ್ಕಾರದ ಸೌಲಭ್ಯ ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ನೂತನ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ದಾನಪ್ಪ ಹುಲಜತ್ತಿ ಹೇಳಿದರು.

ಅವರು ಬುಧವಾರ ರಬಕವಿ–ಬನಹಟ್ಟಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸ್ಥಾನದ ಅಧಿಕಾರ ಸ್ವೀಕರಿಸಿ ಮಾತನಾಡಿದರು. ಈ ಹುದ್ದೆ ನನಗೆ ಬಯಸದೇ ಬಂದ ಭಾಗ್ಯವಾಗಿದ್ದು, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಹಾಗು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನೇತೃತ್ವದಲ್ಲಿ ಇಡೀ ಬನಹಟ್ಟಿಯ ಜನತೆಯ ಆಶೀರ್ವಾದದಿಂದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವಲ್ಲಿ ಯಶಸ್ವಿಯಾಗಿರುವದು ತಮಗೆ ಹೆಮ್ಮೆಯೆಂದರು.



ವಿಧಾನಪರಿಷತ್ ಸದಸ್ಯೆ ಉಮಾಶ್ರೀ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಡಾ. ಎ. ಆರ್. ಬೆಳಗಲಿ, ನಾಮ ನಿರ್ದೇಶಿತ ಸದಸ್ಯರಾದ ಶಂಕರ ಚಿತ್ತರಗಿ, ಹಾರೂನ ಬೇವೂರ, ಪಿಂಟೂ ಕುಂಬಾರ, ಲಕ್ಷ್ಮಣ ದೇಸಾರಟ್ಟಿ, ರಾಜು ಭದ್ರನ್ನವರ, ಭೀಮಶಿ ಮಗದುಮ್, ಸಿದ್ದನಗೌಡ ಪಾಟೀಲ, ಮಲ್ಲು ಬಾಣಕಾರ, ರಾಜು ಅಂಬಲಿ, ಬಸವರಾಜ ಗುಡ್ಡೋಡಗಿ, ನೀಲಕಂಠ ಮುತ್ತೂರ, ಸಂಗಪ್ಪ ಕುಂದಗೋಳ, ಚಿದಾನಂದ ಗಾಳಿ, ದುಂಡಪ್ಪ ಕರಿಗಾರ, ರಾಹುಲ್ ಕಲಾಲ, ರಾಜು ನಂದೆಪ್ಪನವರ, ಸುಕುಮಾರ ಪಾಟೀಲ, ಈಶ್ವರ ಚಮಕೇರಿ, ಗಂಗಪ್ಪ ಶಿರಗಾರ, ಹರ್ಷವರ್ಧನ ಪಟವರ್ಧನ, ಸತ್ಯಪ್ಪ ಮಗದುಮ್, ಶೆಟ್ಟೆಪ್ಪ ಸುಣಗಾರ, ಆಶಾ ಭೂತಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

**ಅವಧಿಗೂ ಮುಂಚೆ ಆಯ್ಕೆ ಬೇಸರ:** ಇತಿಹಾಸದಲ್ಲಿಯೇ ಮೊದಲ ಬಾರಿಗೆ ರಬಕವಿ ಹಾಗು ಬನಹಟ್ಟಿ ಪಟ್ಟಣ ಹೊರತುಪಡಿಸಿ ಹೊಸೂರಿಗೆ ಪ್ರಪ್ರಥಮ ಬಾರಿಗೆ ಪ್ರಾಧಿಕಾರ ಅಧ್ಯಕ್ಷ ಸ್ಥಾನ ದೊರಕಿತ್ತು. ಒಂದು ವರ್ಷಕ್ಕೆ ಇನ್ನೂ ಒಂದು ವಾರ ಅವಧಿಯಿರುವಾಗಲೇ ಮುಂಚೆಯೇ ಯಾರ ಗಮನಕ್ಕೂ ತಾರದೇ ಅಧ್ಯಕ್ಷ ಸ್ಥಾನ ಬದಲಿಸುವಂತಾಗಿದ್ದು, ಇಡೀ ಹೊಸೂರಿನ ಕಾಂಗ್ರೆಸ್ ಮುಖಂಡ ಹಾಗು ಕಾರ್ಯಕರ್ತರಲ್ಲಿ ತೀವ್ರ ಬೇಸರ ತರುವಂತಾಗಿದೆಯೆಂದು ನಿಕಟಪೂರ್ವ ಅಧ್ಯಕ್ಷ ವೆಂಕನಗೌಡ ಪಾಟೀಲ ಬೇಸರಿಸಿದರು.

## ಬನಶಂಕರಿದೇವಿ ಮಹಾದ್ವಾರ ಉದ್ಘಾಟನೆ – ಕಳಸಾರೋಹಣ

# ಎಲ್ಲರನ್ನು ಮುಕ್ತವಾಗಿ ಕರೆಯುವುದೇ ಮಹಾದ್ವಾರ: ಶ್ರೀಶೈಲ ಜಗದ್ಗುರು

**ಮಹಾಲಿಂಗಪುರ :** ಯಾವ ದ್ವಾರದಲ್ಲಿ ಯಾವುದೇ ಭೇದ ಭಾವವಿಲ್ಲದೇ ಎಲ್ಲರನ್ನೂ ಕರೆಯುವ ಗುಣ ಇರುತ್ತದೆಯೋ ಅದಕ್ಕೆ ಮಹಾದ್ವಾರ ಎಂದು ಕರೆಯಲಾಗುತ್ತದೆ ಎಂದು ಶ್ರೀಶೈಲ ಸೂರ್ಯ ಸಿಂಹಾಸನ ಪೀಠದ ಜಗದ್ಗುರು 1008 ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಗುರುವಾರ ಪಟ್ಟಣದ ಶತಮಾನ ಕಂಡ ಬನಶಂಕರಿ ದೇವಸ್ಥಾನದ ಮಹಾದ್ವಾರ ಉದ್ಘಾಟಿಸಿ, ಪಂಚ ಕಳಸಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇವರ ಸಲುವಾಗಿ ಮನುಷ್ಯ ಕಟ್ಟಿದ್ದು ದೇವಾಲಯ ಮಾನವ ನಿರ್ಮಿತ. ಇನ್ನು ದೇವ ನಿರ್ಮಿತವಾದ ದೇಹವೇ ನಮಗೆ ಜೀವಂತ ದೇವಾಲಯ. ದೇಹವೆಂಬ ದೇಗುಲಕ್ಕೆ ಕೇಳುವ ಕೀವಿಗಳೇ ಮಹಾದ್ವಾರಗಳಾಗಿದ್ದು, ಕೀವಿಗಳೆಂಬ ದ್ವಾರ ಬಾಗಿಲು ಮೂಲಕ ಸತ್ಸಂಗ,ಅಧ್ಯಾತ್ಮ,ಸಹಬಾಳ್ವೆ, ಧರ್ಮ ಚಿಂತನೆಯ ಶೋತೃ ಮಾಡುವದೇ ಜೀವನ ಮುಕ್ತಿಯ ಸಾಧನವಾಗಿದೆ.

ಸಾಮಾನ್ಯವಾಗಿ ಮನೆಗಳಿಗೆ ಇರುವುದು ದ್ವಾರ. ದೇವಸ್ಥಾನಗಳಿಗೆ ಇರುವದು ಮಹಾದ್ವಾರ. ದೇವಸ್ಥಾನದ ದ್ವಾರ ಪ್ರವೇಶಕ್ಕೆ ಮುಕ್ತ ಪ್ರವೇಶವಿರುತ್ತದೆ. ಆದರೆ ಮನೆಯ





ದ್ವಾರಕ್ಕೆ ಸೀಮಿತ ವ್ಯಕ್ತಿಗೆ ಸೀಮಿತವಾಗಿರುತ್ತದೆ. ಮನೆಯಲ್ಲಿರುವವರು ಯಾವುದೇ ಭೇದವಿಲ್ಲದೇ ಸರ್ವರನ್ನು ಪ್ರೀತಿಯಿಂದ, ಸಮನಾಗಿ ಕಂಡರೆ, ನಮ್ಮ ದೇಹದಲ್ಲಿನ ಅರಿಷಡ್ವರ್ಗಗಳನ್ನು ಕಳೆದರೆ ಮನೆಯಲ್ಲಿ ವಾಸಿಸುವವರು ದೇವರ ಸ್ವರೂಪಿಗಳಾಗಿ, ಮನೆಯ ದ್ವಾರವು ಮಹಾದ್ವಾರವಾಗಲು ಸಾಧ್ಯ. ಹಿಂದೂಗಳು ಶಿವ ಮತ್ತು ಶಕ್ತಿಯ ಆರಾಧಕರಾಗಿದ್ದು, ಶಿವಭಕ್ತಿಯ ಆರಾಧನೆಗೆ ಶಿವರಾತ್ರಿ. ಶಕ್ತಿದೇವತೆಯ ಆರಾಧನೆಯೇ ನವರಾತ್ರಿ ಎನ್ನುತ್ತಾರೆ. ಶಿವಶಕ್ತಿ ಸೇರಿ ಎರಡನ್ನೂ ಭಕ್ತಿಯಿಂದ ಉಪಾಸನೆ ಮಾಡಿ ಬದುಕನ್ನು ಬಂಗಾರವಾಗಿಸಿಕೊಳ್ಳಬೇಕು ಎಂದರು.

ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮಿಜಿ ಮಾತನಾಡಿ ಪುರಾಣ, ಪ್ರವಚನ ಕೇಳುವುದರಿಂದ ಹಿಂದೂಗಳಲ್ಲಿ ಧರ್ಮ, ಸಂಸ್ಕೃತಿಯನ್ನು ಜಾಗೃತಗೊಳಿಸಲು ಸಾಧ್ಯ. ಪ್ರಸ್ತುತದಿನಮಾನಗಳಲ್ಲಿ ಹಿಂದೂಧರ್ಮವನ್ನು ಎತ್ತಿ ಹಿಡಿಯುವದು ಮತ್ತು ಯುವ ಶಕ್ತಿಯಲ್ಲಿ ಧರ್ಮದ ಜಾಗೃತಿ ಮೂಡಿಸುವದು ಬಹಳ ಅವಶ್ಯಕವಾಗಿದೆ ಎಂದರು.

ಬನಶಂಕರಿ ದೇವಸ್ಥಾನದ ಹಿರಿಯರಾದ ಲಕ್ಕಪ್ಪ ಚಮಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ, 1985 ರಲ್ಲಿ ಮಹಾದ್ವಾರದ ಅಡಿಗಲ್ಲು ಪೂಜೆ, 1993 ರಲ್ಲಿ ಬಾಗಿಲು ನಿರ್ಮಾಣ ಸೇರಿದಂತೆ ಸುಮಾರು ನಾಲ್ವತ್ತು ವರ್ಷಗಳ ಕಾಲ ಶ್ರಮಿಸಿ ಮಹಾದ್ವಾರ ನಿರ್ಮಿಸಲಾಗಿದೆ. ಮಹಾದ್ವಾರ ನಿರ್ಮಾಣ–ಕ್ಕೆ ಸಹಕರಿಸಿದ ಹಲವು ಮಹನೀಯರ ಕೊಡುಗೆಯನ್ನು ಸ್ಮರಿಸಿದರು.

ಸೊಲ್ಲಾಪೂರ– ಮೈಂದರಗಿಯ ಅಭಿನವ ರೇವಣಸಿದ್ಧ ಪಟ್ಟದೇವರು, ಜಮಖಂಡಿ ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯ ಸ್ವಾಮಿಜಿ, ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯ ಸ್ವಾಮಿಜಿ,

ರನ್ನಬೆಳಗಲಿ ಸದಾಶಿವ ಗುರೂಜಿ ಮಾತನಾಡಿದರು.

ಮಹಾದ್ವಾರ ನಿರ್ಮಾಣ ಕೆಲಸ ಮಾಡಿದ ಶ್ರಮಿಕರನ್ನು ಸನ್ಮಾನಿಸಲಾಯಿತು. ಬನಶಂಕರಿ ದೇವಸ್ಥಾನದ ಹಿರಿಯರು ಶ್ರೀಶೈಲ ಜಗದ್ಗುರುಗಳು ಮತ್ತು ಉಪಸ್ಥಿತ ಪೂಜ್ಯರನ್ನು ಸನ್ಮಾನಿಸಿದರು.

**ವರ್ಷವಿಡೀ ಒಂದಿಲ್ಲೊಂದು ಅಧ್ಯಾತ್ಮ, ಸತ್ಸಂಗ, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುವ ಮಹಾಲಿಂಗಪುರ ಪಟ್ಟಣ ಮತ್ತು ಇಲ್ಲಿನ ಸದ್ಭಕ್ತರು ಅಧ್ಯಾತ್ಮ ಮತ್ತು ಸತ್ಸಂಗಕ್ಕೆ ಮಾದರಿಯಾಗಿದ್ದಾರೆ.**

**। ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಶ್ರೀಶೈಲ ಪೀಠ.**

ಈ ಸಂದರ್ಭದಲ್ಲಿ ಹಿರಿಯರಾದ ಮಲ್ಲಪ್ಪ ಭಾವಿಕಟ್ಟಿ,ಶ್ರೀಶೈಲಪ್ಪಬಾಡನವರ,ನಾರಾಯಣ ಕಿರಗಿ, ಸಿದಗಿರಿ ಕಾಗಿ, ಪ್ರಭು ಬೆಳಗಲಿ, ಶ್ರೀಶೈಲಪ್ಪ ಉಳ್ಳಾಗಡ್ಡಿ, ಚಂದ್ರು ಗೊಂದಿ, ಯಲ್ಲಪ್ಪ ಹಟ್ಟಿ, ಬಿ. ವ್ಹಿ. ಕೆರೂರ, ಡಾ. ಬಿ. ಡಿ. ಸೋರಗಾಂವಿ, ಸಿದ್ದಪ್ಪ ನಿಂಬರಗಿ, ಮಲಕಾಜಪ್ಪ ಅಂಬಿ, ಶಂಕರ ಅಂಬಿ, ಈಶ್ವರ ಚಮಕೇರಿ, ಸತೀಶ ಸೋರಗಾಂವಿ, ಬಸವರಾಜ ಚಮಕೇರಿ, ಪ್ರಕಾಶ ಬಾಡನವರ, ರಾಜೇಶ ಭಾವಿಕಟ್ಟಿ, ಕೆ. ಎಂ. ಬಿಜಾಪೂರ, ಚಂದು ಕಾಗಿ, ಶಿವಾನಂದ ಕಿತ್ತೂರ, ಮಂಜುನಾಥ ಭಾವಿಕಟ್ಟಿ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

ಜಿ. ಎಸ್.ಗೊಂಬಿ ಸ್ವಾಗತಿಸಿದರು. ಬಿ. ಸಿ. ಪೂಜಾರಿ ಸೊಗಸಾಗಿ ನಿರೂಪಿಸಿದರು. ಪತ್ರಕರ್ತ ಚಂದ್ರಶೇಖರ ಮೋರೆ ವಂದಿಸಿದರು.

# ಗಾಂಧಿ ಮಾರ್ಗದಲ್ಲಿ ಕಾಮನೂರು

**ಕೊಪ್ಪಳ :** ಭಾರತವನ್ನು ಮದ್ಯಪಾನ ಮುಕ್ತ ದೇಶವನ್ನಾಗಿ ಮಾಡಲು ಮಹಾತ್ಮ ಗಾಂಧಿ ಅವರು ಪ್ರಯತ್ನಿಸಿದ್ದರು.

ಅವರ ಕೆಲ ಆದರ್ಶಗಳನ್ನು ಅನುಸರಿಸುತ್ತಿರುವ ತಾಲ್ಲೂಕಿನ ಲೇಬಗೇರಿ ಗ್ರಾಮಪಂಚಾಯಿತಿವ್ಯಾಪ್ತಿಯಕಾಮನೂರು ಗ್ರಾಮದ ಜನ ಮೂರ್ನಾಲ್ಕು ದಶಕಗಳಿಂದ 'ಗಾಂಧಿ ಮಾರ್ಗ'ದಲ್ಲಿ ಸಾಗುತ್ತಿದ್ದಾರೆ.

ಅಂದಾಜು ಎರಡೂವರೆ ಸಾವಿರ ಜನಸಂಖ್ಯೆಯುಳ್ಳ ಗ್ರಾಮದಲ್ಲಿ ಎಲ್ಲೂ ಹೋಟೆಲ್‌ಗಳಿಲ್ಲ.

ಅಂಗಡಿಗಳಿವೆ, ಗುಟ್ಕಾ ಮಾರುವುದಿಲ್ಲ.

ಮದ್ಯ ಕುಡಿಯಲು ಅವಕಾಶ ಇಲ್ಲವೇ ಇಲ್ಲ.

ಗ್ರಾಮದ ಸುತ್ತ ಹಸಿರ ಸಿರಿ ಆವರಿಸಿದೆ.

ಸಾವಯವ ಕೃಷಿಯೇ ಜನರ ಜೀವಾಳ. ನಿಯಮಗಳನ್ನು ಕಟ್ಟುನಿಟ್ಟಾಗಿ, ಕರಾರುವಾಕ್ಕಾಗಿ ಪಾಲನೆ ಮಾಡುತ್ತಿರುವ ಕಾರಣ ಗ್ರಾಮವು ಈಗಲೂ ಆಧುನಿಕ ಭರಾಟೆಯ ಹಿಡಿತಕ್ಕೆ ಸಿಲುಕದೇ ಅಪ್ಪಟ ಹಳ್ಳಿಯ ಸೊಬಗನ್ನು ಉಳಿಸಿಕೊಂಡಿದೆ.



ಗ್ರಾಮದ ಹಿರಿಯರು ಸೇರಿಕೊಂಡು 34 ದಶಕಗಳ ಹಿಂದೆ ಕೈಗೊಂಡ ಮದ್ಯ ಮಾರಾಟ ನಿಷೇಧ ನಿರ್ಧಾರವನ್ನು ಈಗಿನ ಪೀಳಿಗೆಯೂ ಮುಂದುವರಿಸಿಕೊಂಡು ನಡೆದಿದೆ. ಕಾಮನೂರಿನಲ್ಲಿ ಐದಾರು ಕಿರಾಣಿ ಅಂಗಡಿಗಳಿದ್ದರೂ ಅಲ್ಲಿ ಗುಟ್ಕಾ ಚೀಟಿ ಕಾಣುವುದಿಲ್ಲ.

ಹೊಸದಾಗಿ ಅಂಗಡಿ ಆರಂಭಿಸಿದರೂ ಈ ಬದ್ಧತೆ ಮುಂದುವರಿಸಿಕೊಂಡು ಹೋಗಿದ್ದಾರೆ.

ಗ್ರಾಮದ ಜನ ತಮ್ಮೂರಿನ ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದಾರೆ.

ಶಿಕ್ಷಕರು, ದಾನಿಗಳು ನೆರವಿನಿಂದ 75 ವರ್ಷ ಹಳೆಯದಾದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ 21 ಲಕ್ಷ ಹಣ

**ಮೂರ್ನಾಲ್ಕು ದಶಕಗಳಿಂದ ನಮ್ಮೂರಿನಲ್ಲಿ ಯಾರೂ ಮದ್ಯ ಕುಡಿಯುವುದಿಲ್ಲ. ಈ ಕ್ರಮವನ್ನು ಯುವ ಪೀಳಿಗೆಯವರು ಉಳಿಸಿಕೊಂಡು ಬಂದಿದ್ದಾರೆ.**
**– ಮಾನಪ್ಪ ಬಡಿಗೇರ ಗ್ರಾಮಸ್ಥ**

ಸಂಗ್ರಹಿಸಿ ಒಂದು ಎಕರೆ 20 ಗುಂಟೆ ಜಾಗ ಖರೀದಿಸಿದ್ದಾರೆ.

ಸಂಚಲನ ಮೂಡಿಸಿದ ಮೆರವಣಿಗೆ: ಕೊಪ್ಪಳದಲ್ಲಿರುವ 'ಗಾಂಧಿ ಬಳಗ'ಗ ಸ್ನೇಹಿತರು ಕಳೆದ ವರ್ಷದ ಗಾಂಧಿ ಜಯಂತಿ ವೇಳೆ ಕೊಪ್ಪಳದಿಂದ ಕಾಮನೂರಿಗೆ ಪಾದಯಾತ್ರೆ ಮಾಡಿ ಕಾಮನೂರಿನ ಜನರಿಗೆ ನೈತಿಕ ಬೆಂಬಲ ನೀಡಿದ್ದರು.

ಪಾದಯಾತ್ರೆ ಬಳಿಕ ಸಂಸದ ರಾಜಶೇಖರ ಹಿಟ್ನಾಳ ಕಾಮನೂರು ಗ್ರಾಮವನ್ನು ದತ್ತು ಪಡೆದಿದ್ದಾರೆ.

ಜಿಲ್ಲಾ ಪಂಚಾಯಿತಿಯು ಉದ್ಯೋಗ ಖಾತ್ರಿ ಯೋಜನೆಯಡಿ ಹೆಚ್ಚಿನ ಕಾಮಗಾರಿಗಳನ್ನು ಗ್ರಾಮದಲ್ಲಿ ಕೈಗೊಳ್ಳುತ್ತಿದೆ.

ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

# ಸಡಗರದ ಗಂಗೆ ಸ್ಥಳದ ಮೆರವಣಿಗೆ

**ಕಾರಟಗಿ :** ಪಟ್ಟಣದ ಜೆಪಿ ನಗರದ ಶ್ರೀದೇವಿ ದೇವಾಲಯದಲ್ಲಿ ಶರನ್ನವರಾತ್ರಿ ಉತ್ಸವದ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಶ್ರೀದೇವಿ ಪುರಾಣ ಪ್ರವಚನ ನಡೆದಿದ್ದು, ದುರ್ಗಾಷ್ಟಮಿ ನಿಮಿತ್ತ ಮಂಗಳವಾರ ಗಂಗೆಸ್ಥಳಕ್ಕೆ ಹೋಗಿಬರುವ ಅದ್ದೂರಿ ಮೆರವಣಿಗೆ ಸಡಗರ, ಸಂಭ್ರಮದೊಂದಿಗೆ ನಡೆಯಿತು.

ವೀರಭದ್ರೇಶ್ವರ ದೇವಾಲಯದಲ್ಲಿ ಗಂಗಾಪೂಜೆ ನೆರವೇರಿಸಿದ ಬಳಿಕ ಮೆರವಣಿಗೆ ಆರಂಭಗೊಂಡಿತು. ಪೂರ್ಣಕುಂಭ, ಕಳಸ ಹೊತ್ತ ಮಹಿಳೆಯರು, ಡೊಳ್ಳು, ಝಾಂಜ್‌ಮೇಳ, ಸಂಗೀತ, ಇತರ ವಾದ್ಯಮೇಳಗಳು, ವಾದ್ಯದ ನಾದಕ್ಕೆ ಹೆಜ್ಜೆ ಹಾಕುತ್ತಿದ್ದ ಯುವಕರು ಮತ್ತು ವಿಶೇಷವೆಂದರೆ ಮಹಿಳೆಯರೇ ಪಲ್ಲಕ್ಕಿ ಹೊತ್ತು ಗಮನ ಸೆಳೆದರು.

ಮೆರವಣಿಗೆಯು ಹಳೆಯ ನಾಡಕಚೇರಿ ರಸ್ತೆ, ಡಾ. ರಾಜ್ ಕಲಾಮಂದಿರ, ರಾಜ್ಯ ಹೆದ್ದಾರಿ, ಕನಕದಾಸ ವೃತ್ತ, ನವಲಿ ರಸ್ತೆ ಮಾರ್ಗವಾಗಿ ದೇವಾಲಯ ತಲುಪಿತು. ಮಧ್ಯಾಹ್ನ ಸಾಮೂಹಿಕ ಅನ್ನಸಂತರ್ಪಣೆ, ಸಂಜೆ ಪುರಾಣ ಪ್ರವಚನ ನಡೆಯಿತು.

ಬೆಳಿಗ್ಗೆ ದೇವಾಲಯದಲ್ಲಿ ಅರ್ಚಕ ಕೆ.ಎಂ.ಚನ್ನಬಸಯ್ಯ ಶಾಸ್ತ್ರಿ ನೇತೃತ್ವದಲ್ಲಿ ವಿಶೇಷ ಪೂಜೆ, ಅರ್ಚನೆ, ಅಲಂಕಾರ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಬೆಳಗಿನಿಂದಲೇ ನಾಗರಿಕರು, ಮಹಿಳೆಯರು



ಕುಟುಂಬ ಪರಿವಾರದೊಂದಿಗೆ ಆಗಮಿಸಿ ಪೂಜೆ ಸಲ್ಲಿಸಿ, ಭಕ್ತಿಯನ್ನು ಸಮರ್ಪಿಸಿ, ಪ್ರಸಾದ ಸ್ವೀಕರಿಸಿ ತೆರಳುತ್ತಿರುವುದು ಕಂಡುಬಂತು. ಪಟ್ಟಣದ ಮೂಕಾಂಬಿಕಾ ದೇವಾಲಯದಲ್ಲಿ ಶರನ್ನವರಾತ್ರಿಯ ಸಡಗರ ಮನೆ ಮಾಡಿದೆ.

ಪ್ರತಿದಿನ ವಿಶೇಷ ಪೂಜೆ, ಅರ್ಚನೆ, ಅಲಂಕಾರ, ನೈವೇದ್ಯ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುತ್ತಿವೆ. ತುಂಗಭದ್ರಾ ನಾಲೆಯ ಬಳಿ ಗಂಗಾಪೂಜೆ ಸಲ್ಲಿಸಿ ಮೆರವಣಿಗೆ ಆರಂಭಗೊಂಡಿತು. ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ಪುರಾಣ ಪ್ರವಚನ ನಡೆಯಿತು.

# ಮದ್ಯ ಮುಕ್ತ ಬಿನ್ನಾಳದಲ್ಲಿ ಹಬ್ಬದ ಸಂಭ್ರಮ

**ಬಿನ್ನಾಳ(ಕೊಪ್ಪಳ) :** ಮದ್ಯ ಸೇವನೆ, ಹಲವು ಮನೆಗಳಲ್ಲಿಯೇ ಮದ್ಯದ ಘಾಟು ಸೇರಿದಂತೆ ಸಾಕಷ್ಟು ಸಮಸ್ಯೆ ಹಾಗೂ ಸಂಕಷ್ಟಗಳನ್ನು ಎದುರಿಸಿದ್ದ ಕುಕನೂರು ತಾಲ್ಲೂಕಿನ ಬಿನ್ನಾಳ ಗ್ರಾಮದಲ್ಲಿ ಬದಲಾವಣೆಯ ಗಾಳಿ ಬೀಸಿದ್ದು, ಈಗ ಹಬ್ಬದ ಸಂಭ್ರಮ ಮನೆ ಮಾಡಿದೆ. ಗ್ರಾಮದಲ್ಲಿ ಮದ್ಯದ ಅಮಲು ಹೆಚ್ಚಾಗಿದ್ದರಿಂದ ತಿಳಿವಳಿಕೆಯುಳ್ಳ ಜನರಲ್ಲಿ ಆತಂಕ ಮನೆ ಮಾಡಿತ್ತು. ಇದಕ್ಕೆ ಅಂತ್ಯ ಹಾಡಬೇಕು ಎಂದು ಹಿಂದೆ ಅನೇಕ ಪ್ರಯತ್ನಗಳನ್ನು ಮಾಡಲಾಗಿತ್ತು. ಈಗ ಫಲ ನೀಡುತ್ತಿದೆ. ಈ ಗ್ರಾಮ ಆಧ್ಯಾತ್ಮಿಕವಾಗಿ ಶ್ರೀಮಂತವಾಗಿದ್ದು ಜಯದೇವ ಜಗದ್ಗುರುಗಳು ಇದೇ ಗ್ರಾಮದಲ್ಲಿ ಜನಿಸಿದವರು.

ಆರಂಭದಲ್ಲಿ 'ಚೆನ್ನವೀರದೇವ' ಎನ್ನುವ ಹೆಸರು ಹೊಂದಿದ್ದ ಜಯದೇವ ಸ್ವಾಮೀಜಿ ಬಿನ್ನಾಳದ ಬಸವೇಶ್ವರ ದೇವಸ್ಥಾನದಿಂದ ಅಕ್ಷರಭ್ಯಾಸ ಪ್ರಾರಂಭಿಸಿದರು. ಅನೇಕ ವಿದ್ವತ್ತು ಗಳಿಸಿ ಅನ್ನ, ಜ್ಞಾನದಾಸೋಹಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದರು. 1934ರಲ್ಲಿ ಸ್ವಾಮೀಜಿ ಮಹಾತ್ಮ ಗಾಂಧೀಜಿ ಅವರನ್ನು ಭೇಟಿಯಾಗಿದ್ದರು. ಪ್ರಸ್ತುತ



ಮೇಘಾಲಯದ ರಾಜ್ಯಪಾಲರಾಗಿರುವ ಸಿ.ಎಚ್. ವಿಜಯಶಂಕರ ಅವರ ಮೂಲ ಊರು ಕೂಡ ಇದೇ ಬಿನ್ನಾಳ ಗ್ರಾಮ.

ದೊಡ್ಡ ಪರಂಪರೆ ಹೊಂದಿರುವ ಈ ಗ್ರಾಮದಲ್ಲಿರುವ ಬಸವೇಶ್ವರ ದೇವಸ್ಥಾನ ಗ್ರಾಮಸ್ಥರ ಎಲ್ಲ ಸಾಧನೆಗೂ ಕೇಂದ್ರಬಿಂದು. ಗ್ರಾಮದಲ್ಲಿ ಅವ್ಯಾಹತವಾಗಿದ್ದ ಮದ್ಯದ ಹಾವಳಿಗೆ ಅಂತ್ಯ ಹಾಡಲು ಗ್ರಾಮದ ಪ್ರಜ್ಞಾವಂತರು ಸೇರಿಕೊಂಡು ಸರಣಿ ಸಭೆಗಳನ್ನು ಮಾಡಿದರು. ಪ್ರತಿವರ್ಷ ಶ್ರಾವಣದ ಮೂರನೇ ಸೋಮವಾರ ನಡೆಯುವ ಬಸವೇಶ್ವರ ಜಾತ್ರೆಗೂ ಮೊದಲು ಈ ಸಲ ಗ್ರಾಮದ ಹಿರಿಕಿರಿಯರು ಸೇರಿಕೊಂಡು ಮದ್ಯ ಮುಕ್ತ ಗ್ರಾಮಕ್ಕೆ ಪಣತೊಟ್ಟರು. ಇದಕ್ಕೆ ಆರಂಭದಲ್ಲಿ ಎದುರಾದ ಅನೇಕ ಸವಾಲುಗಳನ್ನು ಗ್ರಾಮಸ್ಥರೇ ಮುಂದೆ ನಿಂತು ಪರಿಹರಿಸಿದ್ದರಿಂದ ಈಗ ಮಾದರಿಯ ಭಿನ್ನ ಗ್ರಾಮವಾಗಿ ಬಿನ್ನಾಳ ಸಂಭ್ರಮಿಸುತ್ತಿದೆ.

ಗ್ರಾಮದ ಕಳಕಪ್ಪ ಕಂಬಳಿ, ಬಸವಂತಪ್ಪ ಕುಟುಗನಹಳ್ಳಿ, ಬಸವರಾಜ ಬನ್ನಿಕೊಪ್ಪ, ಸಂಗಣ್ಣ ತಹಶೀಲ್ದಾರ್, ಮಹಮ್ಮದ್ ಸಾಬ್ ವಾಲೀಕಾರ, ಜಗದೀಶ ಚೆಟ್ಟಿ, ಶಿವಪುತ್ರಪ್ಪ ಕಂಬಳಿ ಹೀಗೆ ಅನೇಕರು ತೊಟ್ಟ ಮದ್ಯಮುಕ್ತ ಗ್ರಾಮದ ಪಣಕ್ಕೆ ಈಗ ಫಲ ಲಭಿಸುತ್ತಿದೆ. ಆದ್ದರಿಂದ ಕೊಪ್ಪಳದ ಗಾಂಧಿ ಬಳಗ ಈ ವರ್ಷ ಬಿನ್ನಾಳಕ್ಕೆ ಪಾದಯಾತ್ರೆ ನಡೆಸಲು ಮುಂದಾಗಿದೆ.

ಗ್ರಾಮದಲ್ಲಿ ಸಂಭ್ರಮ: ಅಂದಾಜು ಮೂರು ಸಾವಿರ ಜನಸಂಖ್ಯೆ ಹೊಂದಿರುವ ಗ್ರಾಮದಲ್ಲಿ ನಡೆಯಲಿರುವ ಪಾದಯಾತ್ರೆ ಬಿನ್ನಾಳ ಹಾಗೂ ಸುತ್ತಮುತ್ತಲ ಗ್ರಾಮಗಳ ಜನರ ಖುಷಿಗೆ ಕಾರಣವಾಗಿದೆ. ಪಾದಯಾತ್ರೆಯಲ್ಲಿ ಬರುವ ನೂರಾರು ಜನರನ್ನು ಅದ್ದೂರಿಯಾಗಿ ಸ್ವಾಗತಿಸಲು ಗ್ರಾಮಸ್ಥರು ಸ್ವಯಂಪ್ರೇರಣೆಯಿಂದ

ಭಾಜಾ ಭಜಂತ್ರಿ, ಮೆರವಣಿಗೆ, ಉಪಾಹಾರ, ವೇದಿಕೆ ಕಾರ್ಯಕ್ರಮ ನಡೆಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

# ಅಧ್ಯಾತ್ಮ ಜ್ಞಾನ ನೀಡುವ ಅಕ್ಷಯ ಪಾತ್ರೆ

**ಜಮಖಂಡಿ :** ಅಜ್ಞಾನದಿಂದ ಜ್ಞಾನದತ್ತ ಜೀವನ ಸಾಗಲು ಅಧ್ಯಾತ್ಮದ ಜೊತೆಗೆ ಗುರುವಿನ ಅವಶ್ಯಕತೆಯಿದೆ. ಅಧ್ಯಾತ್ಮವು ಜ್ಞಾನ ನೀಡುವ ಅಕ್ಷಯ ಪಾತ್ರೆ ಎಂದು ಮುತ್ತೂ–ರಿನ ರಾಚೋಟೇಶ್ವರ ಮಠದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.



ನಗರದ ಮುತ್ತಿನಕಂತಿ ಹಿರೇಮಠದಲ್ಲಿ ಮಹಾಲಕ್ಷ್ಮಿ ಮಹಿಳಾ ಮಂಡಳದ ಸಹಯೋಗದಲ್ಲಿ ಶ್ರೀದೇವಿ ಪುರಾಣ ಮತ್ತು ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಹೆಣ್ಣಿಗೆ ಗೌರವ ನೀಡಿ ಪೂಜಿಸಿ, ಆರಾಧಿಸುವ ಮೂಲಕ ಅಧ್ಯಾತ್ಮವನ್ನು ಪ್ರಪಂಚಕ್ಕೆ ತೋರಿಸಿಕೊಟ್ಟ ದೇಶ ನಮ್ಮದು. ಇಂದಿನ ಪೀಳಿಗೆಯ ಮಕ್ಕಳು, ಯುವಕರು ನಮ್ಮ ಭಾರತೀಯ ಸಂಸ್ಕೃತಿಯನ್ನು ಕೈಬಿಟ್ಟು ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ವಾಲುತ್ತಿದ್ದಾರೆ. ದೇಶದ ಸಂಸ್ಕೃತಿ ಹಾಳು ಮಾಡಿದರೆ ಆ ದೇಶ ಅವನತಿಯತ್ತ ಸಾಗುತ್ತದೆ. ಅಂತರಂಗದಲ್ಲಿ ಭಕ್ತಿಯನ್ನು ಬೆಳಸಿಕೊಳ್ಳಬೇಕು. 84 ಲಕ್ಷ ಜೀವರಾಶಿಯಲ್ಲಿಂದ ಹಾಯ್ದು ಬಂದು ನಂತರ ಮಾನವ ಜನ್ಮ ದೊರೆತಿದ್ದು, ನಾನ್ಯಾರು ಎಂಬುದನ್ನು ಅರಿಯಬೇಕು ಎಂದರು.

ಪ್ರವಚನ ಕೇಸರಿ ನಾವಲಗಿಯ ಶ್ರೀಶೈಲ ಶ್ರೀಗಳು ಮಾತನಾಡಿ, ಮನುಷ್ಯನು ಅಧ್ಯಾತ್ಮ, ಆಚಾರ, ವಿಚಾರ, ಸಂಸ್ಕೃತಿ, ಧರ್ಮ ಪಾಲನೆ ಮಾಡಬೇಕು. ಬ್ರಹ್ಮ ನೀಡಿದ ವರದಿಂದ ದೈತ್ಯ ಮಹಿಷಾಸುರನು ತನ್ನ ದರ್ಪ ಸಾಧಿಸುತ್ತಿರುವಾಗ ಹೆಣ್ಣಿನಿಂದ ತನ್ನ ಸಾವು ಬರಬಾರದು ಎಂದು ಮರೆತ ಅವನಿಗೆ ಆ ತಾಯಿಯಿಂದ ಅವನ ವಧೆಯಾಯಿತು ಎಂದರು.

ಮಹಾಲಕ್ಷ್ಮಿ ಮಹಿಳಾ ಮಂಡಳ ಸದಸ್ಯರ ಮಕ್ಕಳಿಂದ ವಿಶೇಷ ಮಹಿಷಾಸುರ ವಧೆ ನೃತ್ಯ ಪ್ರದರ್ಶಿಸಿದರು.

ವೇದಿಕೆಯಲ್ಲಿ ನಾಡೋಜ

ಡಾ. ಎಚ್. ಜಿ. ದಡ್ಡಿ, ಪ್ರೊ. ಶ್ರೀನಿವಾಸ ಕಟ್ಟಿಮನಿ, ಶಿವಪುತ್ರಯ್ಯ ಸಿಂಧೂರಮಠ, ಪತ್ರಕರ್ತ ಲಕ್ಷ್ಮಿಕಾಂತ್ ದುದಗಿ, ದಶರಥ ವಾಗೆನ್ನವರ, ಮಲ್ಲು ಚನವೀರ ಉಪಸ್ಥಿತರಿದ್ದರು.

# ಆರೋಗ್ಯ ಕ್ಷೇತ್ರದಲ್ಲಿ ಅನಾರೋಗ್ಯ ರಾಜ್ಯ ಸರ್ಕಾರಗಳು ಎಚ್ಚೆತ್ತುಕೊಳ್ಳಬೇಕು

ಬ್ರಿಟಿಷ್ ವೈದ್ಯಕೀಯ ಪತ್ರಿಕೆ ಲ್ಯಾನ್ಸೆಟ್ ಬಿಡುಗಡೆ ಮಾಡಿದ ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಮಧುಮೇಹಿ ರೋಗಿಗಳ ಸಂಖ್ಯೆ 1990ರಲ್ಲಿ ಜಾಗತಿಕವಾಗಿ 20 ಕೋಟಿಯಾಗಿದ್ದರೆ, 2022ರಲ್ಲಿ 80 ಕೋಟಿಗೆ ಏರಿದೆ. 21 ಕೋಟಿ 20 ಲಕ್ಷ ರೋಗಿಗಳೊಂದಿಗೆ ಭಾರತ ಅಗ್ರಸ್ಥಾನದಲ್ಲಿದ್ದು, 14.8 ಮಿಲಿಯನ್ ರೋಗಿಗಳೊಂದಿಗೆ ಚೀನಾ ಎರಡನೇ ಸ್ಥಾನದಲ್ಲಿದೆ. 30 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ರೋಗಿಗಳ ಸಂಖ್ಯೆಯಲ್ಲಿ ಭಾರತ 13 ಕೋಟಿ 30 ಲಕ್ಷ ಸೋಂಕಿತರೊಂದಿಗೆ ಮುಂಚೂಣಿಯಲ್ಲಿದೆ. ಕಾರ್ಬೋಹೈಡ್ರೇಟ್‌ಗಳಿರುವ ಆಹಾರ ಮತ್ತು ಅನಾರೋಗ್ಯಕರ ಜೀವನಶೈಲಿ ಮಧುಮೇಹ ಹೆಚ್ಚುವಿಕೆಗೆ ಪ್ರಮುಖ ಕಾರಣಗಳಾಗಿವೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಧೂಮಪಾನವು 30ರಿಂದ 40 ಪ್ರತಿಶತದಷ್ಟು ಮಧುಮೇಹಕ್ಕೆ ಕಾರಣವಾಗುತ್ತದೆ. ದೇಶದ ಆರೋಗ್ಯ ಪರಿಸ್ಥಿತಿ ಬಹುತೇಕ ರಾಜ್ಯಗಳಲ್ಲೂ ಕಳವಳಕಾರಿಯಾಗಿದೆ.

ಅತಿಯಾದ ಜೀವನಶೈಲಿ, ರೋಗಗಳ ಭಾರೀ ಹೆಚ್ಚಳ ಮತ್ತು ಚಿಕಿತ್ಸೆಯ ಹೆಚ್ಚಿದ ವೆಚ್ಚವು ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಸವಾಲಾಗಿ ಮಾರ್ಪಟ್ಟಿದೆ. ಕ್ಯಾನ್ಸರ್, ಮಧುಮೇಹ, ಹೃದ್ರೋಗ ಮತ್ತು ಬೊಜ್ಜು ಸೇರಿದಂತೆ ಜೀವನಶೈಲಿ ರೋಗಗಳು ಪ್ರಮುಖವಾಗಿ ಗಮನ ಸೆಳೆಯುತ್ತಿವೆ.

ಅನಾರೋಗ್ಯಕರ ಜೀವನಶೈಲಿಯಲ್ಲಿ ವ್ಯಾಯಾಮದ ಕೊರತೆ, ವಿವಿಧ ರುಚಿಗಳ ಹಂಬಲ, ಹಾಗೂ ಆಹಾರ ಪದಾರ್ಥಗಳಲ್ಲಿ ವ್ಯಾಪಕವಾದ ಕಲಬೆರಕೆ ಮುಖ್ಯ ಅಂಶಗಳಾಗಿವೆ. ದಿನಕ್ಕೆ ಮೂರರಿಂದ ಐದು ಬಾರಿ ತಿನ್ನುವ ಅಭ್ಯಾಸ ಜಗತ್ತಿನ ಇತರ



ಭಾಗಗಳಲ್ಲಿ ಸಾಮಾನ್ಯವಾಗಿಲ್ಲವೋ ಎಂಬ ಪ್ರಶ್ನೆ ಉದಯಿಸುತ್ತದೆ.

ಈ ಪರಿಸ್ಥಿತಿಯ ಪರಿಣಾಮವಾಗಿ, ವಿವಿಧ ವೈದ್ಯಕೀಯ ಚಿಕಿತ್ಸಾ ವಿಧಾನಗಳು ಹೆಚ್ಚುತ್ತಿರುವುದು ಗಮನಾರ್ಹವಾಗಿದೆ. ಅಲೋಪತಿ, ಹೋಮಿಯೋಪತಿ, ಆಯುರ್ವೇದ, ಯುನಾನಿ, ನ್ಯಾಚುರೋಪತಿ, ಅಕ್ಯುಪಂಕ್ಚರ್ ಮುಂತಾದ ವಿವಿಧ ಚಿಕಿತ್ಸಾ ಕೇಂದ್ರಗಳು ಕೇರಳದಲ್ಲಿ ಸಕ್ರಿಯವಾಗಿದ್ದು, ಜನರ ಅಗತ್ಯಗಳಿಗೆ ತಕ್ಕಂತೆ ಪ್ರಾಥಮಿಕ ಚಿಕಿತ್ಸೆಯನ್ನು ಒದಗಿಸುತ್ತಿವೆ.

ಆಹಾರ ಮತ್ತು ವ್ಯಾಯಾಮದಲ್ಲಿ ಆರೋಗ್ಯಕರ ಅಭ್ಯಾಸಗಳನ್ನು ಪ್ರಾರಂಭಿಸುವುದು ಈ ಸಮಸ್ಯೆಗೆ ಪರಿಹಾರವಾಗಿದೆ ಎಂದು ಹೇಳಲಾಗುತ್ತದೆ. ಆದರೆ ವೈದ್ಯಕೀಯ ಸೌಲಭ್ಯಗಳ ಗುಣಮಟ್ಟ ಮುಖ್ಯವಾಗಿ ಶ್ರೀಮಂತರಿಗಷ್ಟೇ ಸೀಮಿತವಾಗಿದೆ ಎಂಬುದು ಗಂಭೀರವಾದ ವಿಚಾರ. ಇತ್ತೀಚಿನ ವರ್ಷಗಳಲ್ಲಿ, ಅನೇಕ ಸಣ್ಣ ಆಸ್ಪತ್ರೆಗಳು ಮುಚ್ಚಲು ಪ್ರಾರಂಭವಾಗಿದ್ದು, ಖಾಸಗಿ ಸ್ಟಾರ್ ಆಸ್ಪತ್ರೆಗಳು ಆರೋಗ್ಯ ಕ್ಷೇತ್ರದ ಮೇಲೆ ಅಧಿಕಾರ ಹೊಂದಿವೆ.

ಇಂತಹ ವ್ಯವಸ್ಥೆಯಲ್ಲಿ, ಜನಸಾಮಾನ್ಯರು ಮತ್ತು ಸೀಮಿತ ಆದಾಯ ಹೊಂದಿರುವವರು ಸರ್ಕಾರಿ ಆಸ್ಪತ್ರೆಗಳ ಮೇಲೆ ಮಾತ್ರ ಭರವಸೆಯಿಟ್ಟಿದ್ದಾರೆ. ಆದರೆ, ಸರಕಾರಿ ಆಸ್ಪತ್ರೆಗಳ ದುಸ್ಥಿತಿಯನ್ನು ಸಮರ್ಥವಾಗಿ ತಿದ್ದುಕೊಳ್ಳದಿದ್ದರೆ, ಅದು ಆರೋಗ್ಯ ವ್ಯವಸ್ಥೆಗೆ ತೀವ್ರ ಹಾನಿ ಉಂಟುಮಾಡುವ ಸಾಧ್ಯತೆಯಿದೆ. ಪ್ರಮುಖ ನಗರಗಳ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ, ನುರಿತ ವೈದ್ಯರು ಮತ್ತು ತಜ್ಞರ ಕೊರತೆ ಆತಂಕಕಾರಿಯಾಗಿದ್ದು, ಇದು ಆರೋಗ್ಯ ಕ್ಷೇತ್ರದಲ್ಲಿ ಮತ್ತೊಂದು ದೊಡ್ಡ ಸವಾಲು ಎಂದು ಹೇಳಬಹುದು. ಹೊಸ ಕಟ್ಟಡಗಳು ಮತ್ತು ಸೌಲಭ್ಯಗಳನ್ನು ಉದ್ಘಾಟಿಸುವ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದರೂ, ಬೇಡಿಕೆಗೆ ತಕ್ಕಂತೆ ಸುಳಿಯುವ ಪ್ರಯತ್ನಗಳು ಕಡಿಮೆಯಾಗಿವೆ. ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಇತರ ಪ್ರಮುಖ ವೈದ್ಯಕೀಯ ಕಾಲೇಜುಗಳು ದಾದಿಯರು, ತಂತ್ರಜ್ಞರು ಮತ್ತು ಇತರ ಸಿಬ್ಬಂದಿ ಕೊರತೆಯಿಂದಾಗಿ ಅತೀವ ತೊಂದರೆಯನ್ನು ಅನುಭವಿಸುತ್ತಿವೆ. ಇದು ಪ್ರಮುಖ ಪರಿಣಾಮವನ್ನು ಉಂಟುಮಾಡುತ್ತಿದ್ದು, ಸೀಮಿತ ಆದಾಯ ಹೊಂದಿರುವ ಜನರು ಮತ್ತು ಬಡವರು ತಮ್ಮ ಮನೆಯು ಸೊತ್ತು ಮಾರಾಟ ಮಾಡಿ ಅಥವಾ ಅಡಮಾನವಿಡುವಂತೆ ಒತ್ತಾಯಿಸುತ್ತಿದೆ. ಈ ಪರಿಕಲ್ಪನೆಗೆ ಸ್ವಯಂಸೇವಾ ಸಂಸ್ಥೆಗಳ ಮಾನವೀಯ ಮಧ್ಯಸ್ಥಿಕೆ ಇಲ್ಲದಿದ್ದರೆ, ಆರೋಗ್ಯ ಕ್ಷೇತ್ರವನ್ನು ಮತ್ತಷ್ಟು ಕುಸಿತಕ್ಕೊಳಪಡಿಸಬಹುದು.

ಆರೋಗ್ಯ ವ್ಯವಸ್ಥೆಯ ಸ್ಥಿತಿ ನಿಧಾನಗತಿಯಲ್ಲಿ ಹೇರಳವಾಗುತ್ತಿರುವುದರಿಂದ, ರಾಜ್ಯ ಸರ್ಕಾರಗಳು ತಕ್ಷಣ ಗಮನಹರಿಸಲು ಹಾಗೂ ತುರ್ತು ಕ್ರಮಗಳನ್ನು ಕೈಗೊಳ್ಳಲು ಅಗತ್ಯವಿದೆ.

* * *

**ಕೃಪೆ : ಸನ್ಮಾರ್ಗ**



# ಫ್ರಿಡ್ಜ್‌ನಲ್ಲಿಟ್ಟ ಅನ್ನ ಎಸೆಯದಿರಿ, ಇದು ಆರೋಗ್ಯಕ್ಕೆ ಉತ್ತಮ: ಆಹಾರ ತಜ್ಞ



ಅನ್ನವನ್ನು ಫ್ರಿಡ್ಜ್‌ನಲ್ಲಿ ಇಡುವುದು ಕೆಲವರ ಸಾಮಾನ್ಯ ಅಭ್ಯಾಸವಾಗಿದ್ದರೂ, ಅದು ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಬೀರಬಹುದು ಎಂದು ತಜ್ಞರು ಹೇಳುತ್ತಾರೆ.

ಫ್ರಿಡ್ಜ್‌ನಲ್ಲಿ ಕಾದಿರಿಸಿದ ಅನ್ನ, ಹೊಸತಾಗಿ ಬೇಯಿಸಿದ ಆಹಾರದೊಂದಿಗೆ ಹೋಲಿಸಿದಾಗ, ಕೆಲವು ಆರೋಗ್ಯಕಾರಿ ಲಾಭಗಳನ್ನು ನೀಡುತ್ತದೆ.

ರಾತ್ರಿಯಿಡೀ ಶೈತ್ಯೀಕರಿಸಿದ ಅಕ್ಕಿಯ ಹಿಟ್ಟು, ರೋಗ ನಿರೋಧಕವಾಗಿ ರೂಪಾಂತರಗೊಳ್ಳುತ್ತದೆ. ಮಾತ್ರವಲ್ಲದೆ ಇದು ದೇಹಕ್ಕೆ ನಾರಿನಂತೆ ಕಾರ್ಯನಿರ್ವಹಿಸುತ್ತದೆ. ಶೈತ್ಯೀಕರಿಸಿದ ಅನ್ನವು ಕಡಿಮೆ ಗ್ಲೈಸೆಮಿಕ್ ಅಂಶವನ್ನು ಹೊಂದಿದ್ದು,

ಮಧುಮೇಹ ರೋಗಿಗಳಿಗೆ ತುಂಬಾ ಪ್ರಯೋಜನಕಾರಿ. 1224 ಗಂಟೆಗಳ ಕಾಲ ಶೈತ್ಯೀಕರಿಸಿದ ಅಕ್ಕಿ ಗ್ಲೂಕೋಸ್ ಅಂಶವನ್ನು ಕಡಿಮೆ ಮಾಡುತ್ತದೆ.

ಈ ಅನ್ನವು ಜೀರ್ಣಿಸಿಕೊಳ್ಳಲು ಸುಲಭವಾಗಿದ್ದು,

ಕಡಿಮೆ ಕ್ಯಾಲೋರಿಗಳನ್ನು ಹೊಂದಿರುವುದರಿಂದ ತೂಕನಷ್ಟಕ್ಕೆ ಸಹಾಯಕವಾಗುತ್ತದೆ. ಕರುಳಿನ ಕ್ಯಾನ್ಸರ್‌ನಂತಹ ರೋಗಗಳನ್ನು ತಡೆಯುವ ಬ್ಯಾಕ್ಟೀರಿಯಾವನ್ನು ಉತ್ತೇಜಿಸುತ್ತದೆ. ಫ್ರಿಡ್ಜ್‌ನಲ್ಲಿಟ್ಟ ಅನ್ನವನ್ನು ಮತ್ತೆ ಬೇಯಿಸಿದರೂ ಪೌಷ್ಟಿಕಾಂಶ ಕಡಿಮೆಯಾಗುವುದಿಲ್ಲ.

ಪೌಷ್ಟಿಕತಜ್ಞ ರಾಲ್ಸ್ಟನ್ ಡಿಸೋಜಾ ಅವರ ಪ್ರಕಾರ, ಫ್ರಿಡ್ಜ್‌ನಲ್ಲಿ ಕಾದಿರಿಸಿದ ಅನ್ನವು ತೂಕನಷ್ಟ, ಕರುಳಿನ ಆರೋಗ್ಯ ಮತ್ತು ಜೀರ್ಣಕ್ರಿಯೆಗೆ ಪೂರಕವಾಗಿದೆ.

ಅನ್ನವನ್ನು ಎಸೆಯುವ ಮೊದಲು, ಅದನ್ನು ಉಪಯೋಗಿಸಲು ಪ್ರಯತ್ನಿಸುವುದು ಉತ್ತಮ. ಇದು ಆರ್ಥಿಕ ವ್ಯರ್ಥವನ್ನು ತಡೆಯುವುದಲ್ಲದೆ, ಆರೋಗ್ಯಕ್ಕೂ ಹೆಚ್ಚಿನ ಲಾಭಗಳನ್ನು ನೀಡುತ್ತದೆ.

* * *

**ಕೃಪೆ : ಸನ್ಮಾರ್ಗ**

# ರಕ್ತದೊತ್ತಡದಿಂದ ಬಳಲುತ್ತಿದ್ದೀರಾ? ಹಾಗಿದ್ದರೆ ಈ ಸುದ್ದಿಯನ್ನು ಓದಿ

ನೀವು ರಕ್ತದೊತ್ತಡದಿಂದ ಬಳಲುತ್ತಿದ್ದೀರಾ? ಹಾಗಿದ್ದರೆ ನಿಮ್ಮ ರಕ್ತದೊತ್ತಡಕ್ಕೆ ಪರಿಹಾರವನ್ನು ಸೂಚಿಸುವ ಅಧ್ಯಯನ ವರದಿಯೊಂದು ಬಿಡುಗಡೆಯಾಗಿದೆ. ಅಧಿಕ ಔಷಧಗಳೋ ಅಥವಾ ಕಠಿಣ ಡಯಟ್ಟೋ ಇಲ್ಲದೆಯೇ ಪ್ರತಿದಿನ ನಡೆಸಬಹುದಾದ ಸಣ್ಣ ಸಣ್ಣ ವ್ಯಾಯಾಮಗಳ ಮೂಲಕ ರಕ್ತದೊತ್ತಡವನ್ನು ಸಹಜಗೊಳಿಸಬಹುದು ಎಂದು ಅಧ್ಯಯನ ವರದಿ ತಿಳಿಸಿದೆ.

ಮೆಟ್ಟಿಲುಗಳನ್ನು ಹತ್ತುವುದು, ಓಟ ಅಥವಾ ಸೈಕಲ್ ತುಳಿಯುವುದು ಇತ್ಯಾದಿಯಾಗಿ 20ರಿಂದ 27 ನಿಮಿಷಗಳ ವ್ಯಾಯಾಮದಿಂದ ರಕ್ತದೊತ್ತಡ ಇಳಿಯುವುದಕ್ಕೆ ಕಾರಣವಾಗುತ್ತದೆ ಎಂದು ವರದಿ ತಿಳಿಸಿದೆ. ವಿಶೇಷವಾಗಿ ಹೈಪರ್ ಟೆನ್ಶನ್ ಇರುವವರಿಗೆ ಇಂಥ ವ್ಯಾಯಾಮಗಳು ಬಹಳ ಅನುಕೂಲ



ಎಂದು ವರದಿ ತಿಳಿಸಿದೆ.

ಸಿಡ್ನಿ ಯೂನಿವರ್ಸಿಟಿ ಮತ್ತು ಲಂಡನ್ನಿನ ಯೂನಿವರ್ಸಿಟಿ ಕಾಲೇಜ್ ನೇತೃತ್ವದ ಅಂತಾರಾಷ್ಟ್ರೀಯ ಅಕಾಡೆಮಿಕ್ ಸಂಸ್ಥೆಯಾದ ಪ್ರಾಸ್ಪೆಕ್ಟಿವ್ ಫಿಸಿಕಲ್ ಆಕ್ಟಿವಿಟಿ ಸಿಟ್ಟಿಂಗ್ ಅಂಡ್ ಸ್ಲೀಪ್ ಕನ್ ಸೋರ್ಸ್ ನ ಒಂದು ತಂಡವು ನಡೆಸಿದ ಅಧ್ಯಯನದಲ್ಲಿ ಈ ಫಲಿತಾಂಶ ಲಭ್ಯವಾಗಿದೆ.

ಈ ಅಧ್ಯಯನ ವರದಿಯನ್ನು ಸರ್ಕ್ಯುಲೇಷನ್ ಜರ್ನಲ್ ಪ್ರಕಟಿಸಿದೆ.

ಬೇರೆ ಬೇರೆ ದೈಹಿಕ ಚಟುವಟಿಕೆಗಳು ರಕ್ತದೊತ್ತಡವನ್ನು ಹೇಗೆ ಬಾಧಿಸುತ್ತದೆ ಎಂಬ ಬಗ್ಗೆ ಈ ಅಧ್ಯಯನವನ್ನು ನಡೆಸಲಾಗಿತ್ತು.

ಸಂಶೋಧನಾ ತಂಡವು ಐದು ರಾಷ್ಟ್ರಗಳ 14761 ಸೇವಾ ಕಾರ್ಯಕರ್ತರಿಂದ ಪಡೆದ ಡಾಟಾದ ಮೂಲಕ ಈ ವರದಿಯನ್ನು ತಯಾರಿಸಿದೆ.

* * *

**ಕೃಪೆ : ಸನ್ಮಾರ್ಗ**

## ‘ಕೈ’ ಪಾಳಯದಲ್ಲಿ ಭುಗಿಲೆದ್ದ ಭಿನ್ನಮತ: ಮಾಜಿ ಸಚಿವೆ ಉಮಾಶ್ರೀ ವಿರುದ್ಧ ಕಿಡಿ ಪ್ರಾಧಿಕಾರ ಕಚೇರಿಯ ಮುಂದೆಯೇ ನಡೆದ ಹೈಡ್ರಾಮಾ



**ರಬಕವಿ–ಬನಹಟ್ಟಿ :** ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರ ಆಯ್ಕೆ ಕುರಿತಾಗಿ ಬನಹಟ್ಟಿಯಲ್ಲಿಯ ಪ್ರಾಧಿಕಾರ ಕಾರ್ಯಾಲಯದೆದುರು ಮುಖಂಡರ ನಡುವಿದ್ದ ಭಿನ್ನಾಭಿಪ್ರಾಯ ಭುಗಿಲೆದ್ದು ಕೆಲ ಕಾಲ ಉದ್ವಿಗ್ನ ವಾತಾವರಣ ಸೃಷ್ಟಿಯಾಗುವಂತಾಯಿತು.

ಪ್ರಾಧಿಕಾರ ಅಧ್ಯಕ್ಷ ಸ್ಥಾನ ಪಡೆದ ದಾನಪ್ಪ ಹುಲಜತ್ತಿಯವರ ಪದಗ್ರಹಣಕ್ಕೆ ಆಗಮಿಸಿದ್ದ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀಯವರನ್ನು ನೂರಾರು ಕಾಂಗ್ರೆಸ್ ಕಾರ್ಯಕರ್ತರು ಘೇರಾವ್ ಹಾಕಿ, ಬಹಿರಂಗವಾಗಿ ಆಕ್ರೋಶ ಹೊರ ಹಾಕಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಬಿಜೆಪಿಯ ಸಿದ್ದು ಸವದಿ ವಿರುದ್ಧ ಪರಾಭವಗೊಂಡಿರುವ ಸಿದ್ದು ಕೊಣ್ಣೂರ ಕ್ಷೇತ್ರದ ಹೊಣೆ ಹೊತ್ತು ಪಕ್ಷ ಸಂಘಟಿಸುತ್ತಿದ್ದಾರೆ.

ಹೀಗಿರುವಾಗ ಕ್ಷೇತ್ರದಲ್ಲಿನ ಸ್ಥಾನಗಳ ಹಂಚಿಕೆಯಲ್ಲಿ ಯಾರ ಗಮನಕ್ಕೂ ತರದೇ ಸವಾ9ಧಿಕಾರಿ ಧೋರಣೆಯಿಂದ ಆಯ್ಕೆ ನಡೆಯುತ್ತಿರುವುದನ್ನು ಕಾಂಗ್ರೆಸ್ ಕಾರ್ಯಕರ್ತರು ಖಂಡಿಸಿ ಆಕ್ರೋಶ ಹೊರ ಹಾಕಿದರು.

ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ಶೇಖರ ಹಕ್ಕಲದಡ್ಡಿ ಮಾತನಾಡಿ, ಯಾರಿಗೆ ಯಾರೂ ಶಾಶ್ವತವಲ್ಲ. ಅಧಿಕಾರ ಯಾವಾಗ ಬೇಕಾದರೂ ಬರಬಹುದು ಹೋಗಬಹುದು. ಆದರೆ, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಈ ಬಗ್ಗೆ ಪಕ್ಷದ ವರಿಷ್ಠರೊಂದಿಗೆ ಪ್ರತ್ಯೇಕವಾಗಿ ಭೇಟಿ ಮಾಡಿ ಚರ್ಚೆ ಮಾಡುತ್ತೇವೆಂದು ತಿಳಿಸಿದರು.

ಸಾಮಾಜಿಕ ಜಾಲ ತಾಣದ ಮತ್ತೋರ್ವ ಕಾರ್ಯಕರ್ತ ಕಿರಣ ಕರಲಟ್ಟಿ ಮಾತನಾಡಿ, ಕ್ಷೇತ್ರದಲ್ಲಿ ಉಮಾಶ್ರೀಯವರಿಂದ ಯಾವುದೇ ಕಾರ್ಯ ಚಟುವಟಿಕೆಯಿಲ್ಲ. ಪರಾಜಿತಗೊಂಡಿರುವ ಸಿದ್ದು ಕೊಣ್ಣೂರಕ್ಷೇತ್ರಮುನ್ನಡೆಸಿಕೊಂಡುಹೋಗುತ್ತಿದ್ದಾರೆ. ಕ್ಷೇತ್ರದಲ್ಲಿನ ಆಗು–ಹೋಗುಗಳೊಂದಿಗೆ ಪಕ್ಷದ ಸ್ಥಾನಗಳನ್ನು ಹೊಂದಿರುವ ಮುಖಂಡರಿಗೂ ಕೂಡ ಯಾವುದೇ ಮಾಹಿತಿಯಿಲ್ಲದೆ ಸ್ಥಳೀಯ ಸಂಸ್ಥೆಗಳ ಸ್ಥಾನಮಾನಗಳು ಯಾವುದೇ ರೀತಿಯಲ್ಲಿ ಪಕ್ಷಕ್ಕಾಗಿ ಸಕ್ರಿಯವಲ್ಲದವರ ಪಾಲಾಗುತ್ತಿವೆ. ಇದರಿಂದ ಸಾಕಷ್ಟು ಹಿರಿಯ ಹಾಗು ಯುವ ಕಾರ್ಯಕರ್ತರಿಗೆ ಇದರಿಂದ ಅತೀವ ಬೇಸರ ತರುವಲ್ಲಿ ಕಾರಣವಾಗಿದೆಯೆಂದು ವಿಷಾದ ವ್ಯಕ್ತಪಡಿಸಿದರು.

ವಿಧಾನಪರಿಷತ್‌ಸದಸ್ಯೆಉಮಾಶ್ರೀಯವರುತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಮುಂದೆ ಬರಲಿರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಸೇ–ರಿದಂತೆ ಸ್ಥಳೀಯ ಸಂಘ ಸಂಸ್ಥೆಗಳ ಚುನಾವಣೆ ಬರಲಿವೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ಗೆಲ್ಲಿಸಬೇಕಾದರೆ ಎಲ್ಲರೂ ಒಟ್ಟಾಗಿ ಹೋಗಬೇಕು. ಅದರೆ, ನಮ್ಮ ಬೇಡಿಕೆಗಳಿಗೆ ಪಕ್ಷದಲ್ಲಿ ಸರಿಯಾಗಿ ಸ್ಪಂದನೆಯಾಗುತ್ತಿಲ್ಲ. ಯಾವುದಕ್ಕೂ ನಮ್ಮನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲವೆಂದು ನೂರಾರು ಕಾರ್ಯಕರ್ತರು ತೀವ್ರ ಆಕ್ರೋಶ ಹೊರಹಾಕಿದರು.

ಈ ಸಂದರ್ಭ ಉಮಾಶ್ರೀ ಅವರು ಮಾತನಾಡಿ, ಪಕ್ಷದಲ್ಲಿ ಶ್ರಮಿಸಿದ ನಿಷ್ಠಾವಂತ ಕಾರ್ಯಕರ್ತರನ್ನು ಪಕ್ಷ ಎಂದಿಗೂ ಕೈ ಬಿಡುವದಿಲ್ಲ. ಪ್ರಾಮಾಣಿಕ ಪ್ರಯತ್ನದಿಂದ ದಾನಪ್ಪ ಹುಲಜತ್ತಿಯವರಿಗೆ ಪ್ರಾಧಿಕಾರ ಅಧ್ಯಕ್ಷ ಸ್ಥಾನ ದೊರೆತಿದೆ. ಅದರಂತೆ ಮುಂದೆಯೂ ಎಲ್ಲ ಕಾರ್ಯಕರ್ತರಿಗೆ ಸೂಕ್ತ ಸ್ಥಾನ–ಮಾನ ದೊರೆಯಲಿದೆ ಎಂದರು.

**ಪೊಲೀಸ್ ಬಂದೋಬಸ್ತ್:**

ಪ್ರತಿಭಟನೆಯ ಕೂಗಾಟದಿಂದಾಗಿ ಮುಂಜಾಗ್ರತಾ ಕ್ರಮವಾಗಿ ಸಿಪಿಐ ಸಂಜಯ ಬಳಿಗಾರ ಹಾಗು ಪಿಎಸ್‌ಐ ಶಾಂತಾ ಹಳ್ಳಿ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಪ್ರಾಧಿಕಾರ ಕಚೇರಿಯಿಂದ ಉಮಾಶ್ರೀಯವರು ಹೊರಬರುತ್ತಿದ್ದಂತೆ ಪ್ರತಿಭಟನಾನಿರತ ಕಾರ್ಯಕರ್ತರು ಉಮಾಶ್ರೀ ಅವರ ವಿರೋಧ ಧಿಕ್ಕಾರದ ಘೋಷಣೆ ಕೂಗಿದರು.

# ಯುಕೆಪಿ 3ನೇ ಹಂತದ ಯೋಜನೆ: ಮೂರು ವರ್ಷದಲ್ಲಿ ರೈತರಿಗೆ ಪರಿಹಾರ: ಸಚಿವ ಎಚ್.ಕೆ. ಪಾಟೀಲ



**ಜಮಖಂಡಿ :** ಉತ್ತರ ಕರ್ನಾಟಕದ ಬಹುದೊಡ್ಡ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತಕ್ಕೆ ಸರ್ಕಾರ ಒಪ್ಪಿಗೆ ನೀಡಿದ್ದು, ಮೂರು ವರ್ಷದಲ್ಲಿ ಭೂಮಿ ಕಳೆದುಕೊಳ್ಳುವ ರೈತ–ರಿಗೆ ಪರಿಹಾರ ನೀಡಲಾಗುವದು ಎಂದು ಪ್ರವಾಸೋದ್ಯಮ, ಕಾನೂನು ಮತ್ತು ಸಂಸದಿಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಹೇಳಿದರು. ಅವರು

ತಾಲೂಕಿನ ತುಂಗಳ ಗ್ರಾಮದಲ್ಲಿ ಮಂಗಳವಾರ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪಂಚ ಗ್ಯಾರಂಟಿ ಯೋಜನೆಗಳಂತೆ ಯುಕೆಪಿ ಮೂರನೇ ಹಂತದ ಯೋಜನೆ ಜಾರಿಗೊಳಿಸಲಾಗುವದು. 75 ಸಾವಿರ ಎಕರೆ ಭೂಸ್ವಾಧೀನಕ್ಕೆ 30 ಸಾವಿರ ಕೋಟಿ ರೂ. ಮತ್ತು ಎಡ–ಬಲದಂಡೆ ಕಾಲುವೆಗಳ ನಿರ್ಮಾಣಕ್ಕೆ 50 ಸಾವಿರ ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗುತ್ತದೆ.

ಅದಕ್ಕಾಗಿ 25 ಸಾವಿರ ಕೋಟಿಗಳನ್ನು ರೂ. ಗಳನ್ನು ಮೂರು ವರ್ಷಗಳ ಅವಧಿಯಲ್ಲಿ ರೈತರಿಗೆ ಮುಟ್ಟಿಸುವ ಕೆಲಸ ಮಾಡುತ್ತೇವೆ ಎಂದರು.

ಯುಕೆಪಿ ಮೂರನೇ ಹಂತದ ಯೋಜನೆಯಿಂದ ಸಾವಿರಾರು ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಲಭಿಸಲಿದೆ. ಅಂದರೆ 12 ಲಕ್ಷ ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಡುವ ಯೋಜನೆಗೆ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. 519 ಮೀಟರ ನೀರು ಸಂಗ್ರಹಣೆಯಿಂದ 524.265 ಮೀಟರ ನೀರು ನಿಲ್ಲಿಸಲು ಕೇಂದ್ರ ಸರ್ಕಾರ ರಾಜ್ಯ ಪತ್ರದಲ್ಲಿ ಅವಾರ್ಡ ಮಾಡುವ ಮೂಲಕ ಅನುಮತಿ ನೀಡಬೇಕಿದೆ.

ಅದಕ್ಕಾಗಿ 2.5 ವರ್ಷಗಳ ಕಾಲಾವಧಿ ಬೇಕಾಗುತ್ತದೆ. ಇಲ್ಲವಾದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ. ನೀರಾವರಿಯಿಂದ ಜನರ ಬದುಕು ಹಸನಾಗಲಿದೆ. ಪ್ರಸಕ್ತ ಪಂಚ ಗ್ಯಾರಂಟಿಗಳಿಂದ ಪ್ರತಿ ಬಡ ಕುಟುಂಬಗಳಿಗೆ ತಿಂಗಳಿಗೆ ತಲಾ ಐದು ಸಾವಿರ ತಲುಪುತ್ತಿದ್ದು ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಜಿಲ್ಲಾ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪೂರ ಮಾತನಾಡಿ, ಸಚಿವ ಎಚ್. ಕೆ. ಪಾಟೀಲರು ತುಂಗಳ ಗ್ರಾಮದ ಬೀಗರು ಅವರು ಶ್ರಮ ಪಟ್ಟು ಸಾವಳಗಿ–ತುಂಗಳ ಏತ ನೀರಾವರಿ ಯೋಜನೆ ಜಾರಿಗೆ ತರುವ ಮೂಲಕ ನೀರು ತಂದುಕೊಟ್ಟಿದ್ದಾರೆ. ಇಂತಹ ಬೀಗರಿದ್ದರೇ ನಮ್ಮೆಲ್ಲ ಸಮಸ್ಯೆಗಳು ಪರಿಹಾರವಾಗಲಿವೆ.

ಸಾವಳಗಿತುಂಗಳಏತನೀರಾವರಿಯೋಜನೆ ನಿರ್ವಹಣೆಗೆ ಪ್ರಯತ್ನಿಸಲಾಗುವದು. ಸರ್ಕಾರದ ಯೋಜನೆಗಳಿಂದ ಬಡವರಿಗೆ ಸಾಕಷ್ಟು ಅನುಕೂಲವಾಗಿದೆ ಎಂದರು.

ಬೀಳಗಿ ಶಾಸಕ, ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಜೆ. ಟಿ. ಪಾಟೀಲ ಮಾತನಾಡಿ, ಬರಗಾಲ ಪ್ರದೇಶವಾಗಿದ್ದ ಜಮಖಂಡಿ ಕ್ಷೇತ್ರದ ಕೊನೆಯ ಭಾಗದ ಹಳ್ಳಿಗಳಿಗೆ ಅನುಕೂಲವಾಗುವ ತುಬಚಿ ಏತ ನೀರಾವರಿ ಯೋಜನೆಯನ್ನು ಜಾ–ರಿಗೆ ತರಬೇಕು. ಸಾವಳಗಿ ತುಂಗಳ ಏತ ನೀರಾವರಿ ನೀರು ತಾಲೂಕಿನ ಕೊನೆ ಭಾಗದ ಹಳ್ಳಿಗಳಿಗೆ ತಲುಪುತ್ತಿಲ್ಲ. ಅಥಣಿ ಭಾಗದಿಂದ ಬರುವ ನೀರು ಕೊನೆ ಭಾಗಕ್ಕೆ ತಲುಪುತ್ತಿಲ್ಲ. ಸರ್ಕಾರ ಯುಕೆಪಿ ಮೂರನೇ ಹಂತದ ಯೋಜನೆ ಜಾರಿಗೊಳಿಸಲು ಒಪ್ಪಿದ್ದು, ಮೂರು ವರ್ಷಗಳ ಆವಧಿಯಲ್ಲಿ ಪರಿಹಾರ ವಿತರಿಸುವ ಕೆಲಸವಾಗಲಿದೆ ಎಂದರು.

ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ಆನಂದ ನ್ಯಾಮಗೌಡ ಮಾತನಾಡಿದರು. ವೇಮನ ವಿ.ವಿ. ಸಂಯೋಜಕ ಎಚ್. ಬಿ. ನಿಲಗುಂದ, ಪ್ರಾಚಾರ್ಯ ಟಿ. ಪಿ. ಗಿರಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕೊಕಟನೂರಿನ ಗುರುಶಾಂತಲಿಂಗ ಸ್ವಾಮಿಗಳು, ಸಿದ್ಧಲಿಂಗ ಆಶ್ರಮದ ಅನುಸೂಯಾತಾಯಿ, ಈಶ್ವರಿ ವಿವಿಯ ವೈಷ್ಣವಿಅಕ್ಕ, ದೇವಸ್ಥಾನದ ಅರ್ಚಕ ಶಂಕರ ಕುಲಕರ್ಣಿ, ಏಗಪ್ಪ ಸವದಿ, ಅರ್ಬನ್ ಬ್ಯಾಂಕ ಅಧ್ಯಕ್ಷ ರಾಹುಲ ಕಲೂತಿ, ನಿರ್ದೇಶಕರಾದ ಅರುಣಕುಮಾರ ಶಹಾ, ಫಕೀರಸಾಬ ಬಾಗವಾನ, ಶ್ರೀಶೈಲ ದಳವಾಯಿ,

ವರ್ಧಮಾನ ನ್ಯಾಮಗೌಡ, ಅರ್ಜುನ ದಳವಾಯಿ, ಮುತ್ತಣ್ಣ ಹಿಪ್ಪರಗಿ, ಸುಶೀಲಕುಮಾರ ಬೆಳಗಲಿ, ಎಲ್. ಆರ್. ಉದಪುಡಿ, ತುಕಾರಾಮ ಹಾಜವ್ವಗೋಳ, ಕಲ್ಲಪ್ಪ ಗಿರಡ್ಡಿ, ವಿಜಯಲಕ್ಷ್ಮೀ ಹೊಸೂರು, ಪಿಡಿಓ ಅಶೋಕ ಜನಗೌಡ, ಬಸವಂತಣ್ಣ ಕನಾಳ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

# 24ನೇ ವರ್ಷದ ನಾಡದೇವಿ ಜಾತ್ರಾ ಮಹೋತ್ಸವ





**ವಿಜಯಪುರ :** ಜಿಲ್ಲೆಯ ತಿಕೋಟಾ ತಾಲೂಕಿನತೋರವಿಗ್ರಾಮದಶ್ರೀಶಿವಶರಣ ಹರಳಯ್ಯ ನಾಡದೇವಿ ತರುಣ ಮಂಡಳಿ ತೋರವಿಯ ಗ್ರಾಮದಲ್ಲಿ 24ನೇ ವರ್ಷದ ನವರಾತ್ರಿ ನಾಡದೇವಿ ಜಾತ್ರಾ ಮಹೋತ್ಸವ ಮತ್ತು 25 ನೇ ವರ್ಷದ ಬೆಳ್ಳಿ ಮಹೋತ್ಸವದ ಪೂರ್ವಭಾವಿ ಕಾರ್ಯಕ್ರಮ ಅದ್ದೂ–ರಿಯಾಗಿ ನೆರವೇಸಿದ್ದರು

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿದ ಪರಮಪೂಜ್ಯ ಶ್ರೀ ಅಭಿನವ ಮುರಗೇಂದ್ರ ಹಿರೇಮಠ ಶ್ರೀಗಳಾದ ಮಲ್ಲಿಕಾರ್ಜುನ್ ಹಿರೇಮಠ ಮತ್ತು ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಯ ವಿಧಾನ ಪರಿಷತ್ ಸದ್ಯಸರಾದ ಸುನೀಲಗೌಡ ಪಾಟೀಲ ಸಸಿಗೆ ನೀರು ಉನಿಸುವ ಮೂಲಕ ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ನಂತರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸುನಿಲಗೌಡ ಪಾಟೀಲ ದಸರಾದ ವಿಜಯ ದಶಮಿ ಕುರಿತು ಅತೀ ವಿಸ್ತಾರ ವಿವರವಾಗಿ ಹೇಳಿದರು ನನ್ನ ಗ್ರಾಮ ತೋರವಿ ಗ್ರಾಮ ನಿಮ್ಮಗಾಗಿ ನಾವು 24*7 ಏವಾಗಲು ಕರಿರಿ ನಾವು ಬರುತ್ತೇವೆ ಎಂದು ಅದ್ಭುತವಾಗಿ ಮಾತನಾಡಿದರು ಹಾಗೂ

ಸಿದ್ದಸಿರಿ ಬ್ಯಾಂಕಿನ ಅಧ್ಯಕ್ಷರಾಗಿರುವ ರಾಮನಗೌಡ ಬಸವನಗೌಡ ಯತ್ನಾಳ್ ಮರಿ ಹುಲಿ ಯತ್ನಾಳ್ ಶ್ರೀ ಶಿವಶರಣ ಹರಳಯ್ಯನವರ ಬಗ್ಗೆ ಅದ್ಭುತವಾಗಿ ವಿವರರಿಸಿ ಸಮಗಾರ ಸಮಾಜ ಎಂದರೇ ಕಡಿಮೆ ಅಲ್ಲ.. ಅಂತಹ ಮಹಾ ಬಸವಣ್ಣ ಶಿವಶರಣ ಹರಳಯ್ಯ ವರರಿಗೆ ಶರಣು ಶರಣಾರ್ಥಿ ಎಂದು ಹೇಳಿದರು ಮತ್ತು ಮಕ್ಕಳಿಗೆ ಶಿಕ್ಷಣ ಬಹಳ ಅವಶ್ಯಕತೆ ಎಂದು ಬಹಳ ಸುಂದರವಾಗಿ ರಾಮನಗೌಡ ಜೀವನದಲ್ಲಿ ನಡೆದ ಘಟನೆ ಉದಾಹರಣೆ ಕೊಟ್ಟು ಅರ್ಥಪೂರ್ಣವಾಗಿ ಮಾತನಾಡಿದರು ಹಾಗೂ ಅನೇಕ ಗಣ್ಯರು ಮಾತನಾಡಿದರು

ಈ ಸಂದರ್ಭದಲ್ಲಿ ಃಐಆಇ ಸಂಸ್ಥೆಯ ನಿರ್ದೇಶಕರಾದ ಸುರೇಶ. ಕೆ ಪಾಟೀಲ ತೋರವಿಯ ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸುರೇಶಗೌಡ ಬಿರಾದಾರ ಹಾಗೂ ಸಮಾಗರ ಓಣಿಯ ಗ್ರಾಮ ಪಂಚಾಯಿತಿಯ ಸದ್ಯಸರಾದ ಗಂಗವ್ವ ಬೆನಕನಹಳ್ಳಿ ಮತ್ತು ತೋರವಿ ಗ್ರಾಮದ ಗಣ್ಯರಾದ ಬಾಬುಗೌಡ ಬಿರಾದಾರ ಹರಳಯ್ಯ ಸಮಾಜದ ಹಿರಿಯರಾದ ಲಕ್ಕಪ್ಪ ಕಟ್ಟಿಮನಿ ಹಾಗೂ ಹಣಮಂತ ಹೊನ್ನಕಾಂಬಳೆ ಹಾಗೂ ತೋರವಿ ಗ್ರಾಮದ ಗುರುಹಿರಿಯರು ಗ್ರಾಮಸ್ಥರು ಮಾಧ್ಯಮ ಪ್ರತಿನಿಧಿ ಪೊಲೀಸ್ ಇಲಾಖೆಯ ಸಿಬ್ಬಂದಿರಾದ ಪವಾರ್ ಮುದ್ದು ಮಕ್ಕಳು ಸುತ್ತಲಿ ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಮಹಾತ್ಮಾ ಗಾಂಧಿ ಮತ್ತು ಲಾಲ ಬಹಾದ್ದೂರ ಶಾಸ್ತ್ರಿ ಜಯಂತಿ



**ವಿಜಯಪುರ :** ನಗರದ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಇಂದು ಗುರುವಾರ ಮಹಾತ್ಮಾ ಗಾಂಧಿಯವರ 156ನೇ ಮತ್ತು ಲಾಲ ಬಹಾದ್ದೂರ ಶಾಸ್ತ್ರಿಯವರ 121ನೇ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಡೀಮ್ಡ್ ವಿವಿ ಹಂಗಾಮಿ ಕುಲಪತಿ, ಡಾ. ಅರುಣ ಚಂ.ಇನಾಮದಾರ ಅವರು ಗಾಂಧಿ ಮತ್ತು ಶಾಸ್ತ್ರಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಗಾಂಧಿಯವರು ಸತ್ಯ ಮತ್ತು ಅಹಿಂಸೆ ತತ್ವಗಳ ಮೂಲಕ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಅವರ ಸತ್ಯ ಮತ್ತು ಅಹಿಂಸೆ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಲಾಲ ಬಹಾದ್ದೂರ ಶಾಸ್ತ್ರಿ ಅವರ ಜೈ ಜವಾನ್ ಜೈ ಕಿಸಾನ್ ಘೋಷವಾಕ್ಯ ದೇಶದ ಸೈನಿಕರು ಮತ್ತು ರೈತರ ಮಹತ್ವವನ್ನು ನೆನಪಿಸುವ ಶಾಶ್ವತ ಸಂದೇಶವಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಸಚಿವ ಡಾ. ಆರ್. ವಿ. ಕುಲಕರ್ಣಿ, ವೈದ್ಯಕೀಯ ವಿಭಾಗದ ಡೀನ್ ಹಾಗೂ ಹಂಗಾಮಿ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ, ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ವೈದ್ಯಕೀಯ ಅಧೀಕ್ಷಕ, ಡಾ. ಆರ್. ಎಂ. ಹೊನ್ನುಟಗಿ, ಆರ್ ಆ?ಯಂಡ್ ಡಿ ನಿರ್ದೇಶಕ ಡಾ. ಎಂ. ಎಂ. ಪಾಟೀಲ, ಪೆಥಾಲಾಜಿ ವಿಭಾಗದ ಮುಖ್ಯಸ್ಥೆ ಡಾ. ಸುರೇಖಾ ಹಿಪ್ಪರಗಿ, ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಆರ್. ಜಿ. ಕುಲಕರ್ಣಿ, ಸಹಾಯಕ ಪ್ರಾಧ್ಯಾಪಕ ಶೇಷಾದ್ರಿ ಕೆ., ಉಪಕುಲಸಚಿವ, ಸತೀಶ ಪಾಟೀಲ, ಸಹಾಯಕ ಕುಲಸಚಿವ ಡಾ. ಶ್ರೀಧರ ಬಗಲಿ, ಸಹಾಯಕ ಕಾನೂನು ಅಧಿಕಾರಿ, ಐ. ಬಿ. ಮಠಪತಿ, ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ವಿವಿ ಸಿಬ್ಬಂದಿ ಉಪಸ್ಥಿತರಿದ್ದರು.

# ಸೈಕ್ಲಿಂಗ್: ವಿಜಯಪುರ, ಬಾಗಲಕೋಟೆ ಪಟುಗಳ ಪಾರಮ್ಯ



**ಬೆಳಗಾವಿ :** ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸೈಕ್ಲಿಸ್ಟ್‌ಗಳು ಶನಿವಾರ ಇಲ್ಲಿ ಆರಂಭವಾದ 16ನೇ ರಾಜ್ಯ ರಸ್ತೆ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನ ಟೈಮ್ ಟ್ರಯಲ್ಸ್‌ನಲ್ಲಿ ಪಾರಮ್ಯ ಮೆರೆದರು.

**ಫಲಿತಾಂಶ:**

ಪುರುಷರು: ಮುಕ್ತ ವಿಭಾಗ; 30 ಕಿ.ಮೀ: ಸೌರಭ್ ಸಿಂಗ್ (ಬೆಂಗಳೂರು; 40.21 ನಿ.)?1, ಸುಜಲ್ ಜಾಧವ (ವಿಜಯಪುರ; 41.35 ನಿ.)?2, ಉದಯ ಗುಳೇದ (ಧಾರವಾಡ; 42.54 ನಿ.)?3.

23 ವರ್ಷದೊಳಗಿನವರಿಗೆ 30 ಕಿ.ಮೀ: ಮಲ್ಲಿಕಾರ್ಜುನ ಶಿರೋಳ (ಬಾಗಲಕೋಟೆ; 43.21 ನಿ.)?1, ಮಲ್ಲಿಕಾರ್ಜುನ ಯಾದವಾಡ (ಬಾಗಲಕೋಟೆ; 43.27 ನಿ.)?2, ಹಾರ್ದಿಕ್ ರಾಯ್ (ಉಡುಪಿ; 43.47 ನಿ.)?3.

ಬಾಲಕರು: 18 ವರ್ಷದೊಳಗಿನವರು. 20 ಕಿ.ಮೀ: ಶ್ರೀನಿವಾಸ ರಜಪೂತ (ವಿಜಯಪುರ; 29.04 ನಿ.)?1, ನಿತೀಶ ಪೂಜಾರಿ (ವಿಜಯಪುರ; 29.07 ನಿ.)?2, ಹನುಮಂತ ಹುಲ್ಲಿಕೇರಿ (ಯಾದಗಿರಿ; 29.41 ನಿ.)?3.

16 ವರ್ಷದೊಳಗಿನವರು: 15 ಕಿ.ಮೀ: ಧನುಷ್ ಪ್ರಶಾಂತ (ಬೆಂಗಳೂರು; 21.01 ನಿ.)?1, ಹೊನ್ನಪ್ಪ ಧರ್ಮಟ್ಟಿ (ಚಂದರಗಿ, ಬೆಳಗಾವಿ; 21.12 ನಿ.)?2, ಪುನೀತ ಬಿರಾದಾರ (ವಿಜಯಪುರ; 21.40 ನಿ.)?3.

14 ವರ್ಷದೊಳಗಿನವರು? 10 ಕಿ.ಮೀ: ಸಿದ್ದಲಿಂಗ ಜಕ್ಕಣ್ಣವರ (ಬಾಗಲಕೋಟೆ; 16.29 ನಿ.)?1, ಅಭಿಷೇಕ ದಿಡ್ಡಿಬಾಗಿಲ (ವಿಜಯಪುರ; 16.34 ನಿ.)?2, ಬಸವರಾಜ ಯಳಮೇಲಿ (ವಿಜಯಪುರ; 16.36 ನಿ.)?3.

ಮಹಿಳೆಯರು: 20 ಕಿ.ಮೀ: ಗಂಗಾ ದಂಡಿನ (ಯಾದಗಿರಿ; 33.26 ನಿ.)?1, ಟಿಂ.ಟಿಂ. ಶರ್ಮಾ (ಬೆಂಗಳೂರು; 33.57 ನಿ.)?2, ಪಾಯಲ್ ಚವ್ಹಾಣ (ವಿಜಯಪುರ; 34.07 ನಿ.)?3.

ಬಾಲಕಿಯರು: 18 ವರ್ಷದೊಳಗಿನವರು? 15 ಕಿ.ಮೀ: ಛಾಯಾ ನಾಗಶೆಟ್ಟಿ (ವಿಜಯಪುರ; 24.02 ನಿ.)?1, ಆಯೇಷಾ ಮೋಮಿನ್ (ಬಾಗಲಕೋಟೆ; 25.32 ನಿ.)?2, ಜ್ಯೋತಿ ರಾಠೋಡ (ಬಾಗಲಕೋಟೆ; 25.37 ನಿ.)?3.

16 ವರ್ಷದೊಳಗಿನರು? 10 ಕಿ.ಮೀ: ದೀಪಿಕಾ ಫಡತಾ–ರೆ (ವಿಜಯಪುರ; 16.41 ನಿ.)?1, ಪೂರ್ವಿ ಸಿದ್ದವ್ವಗೋಳ (ಯಾದಗಿರಿ; 17.08 ನಿ.)?2, ನಂದಿನಿ ಲಮಾಣಿ (ಬಾಗಲಕೋಟೆ; 17.31 ನಿ.)?3.

14 ವರ್ಷದೊಳಗಿನವರು? 7 ಕಿ.ಮೀ: ಪ್ರಿಯಾಂಕಾ ಲಮಾಣಿ (ಗದಗ; 11.55 ನಿ.)?1, ವಿದ್ಯಾ ಲಮಾಣಿ (ಬಾಗಲಕೋಟೆ; 12.15 ನಿ.)?2, ವರ್ಷಾ ಚವ್ಹಾಣ (ವಿಜಯಪುರ; 12.29 ನಿ.)?3.

# ಬಿಜೆಪಿ ಕಾರ್ಯಾಲಯದಲ್ಲಿ ಜಗದ್ಗುರು ಮಧ್ವಾಚಾರ್ಯರ, ಮಹಾತ್ಮಾ ಗಾಂದಿಜಿ ಹಾಗೂ ಲಾಲ ಬಹದ್ದೂರ ಶಾಸ್ತಿರವರ ಜಯಂತಿಯನ್ನು



**ವಿಜಯಪುರ:**ಭಾರತೀಯಜನತಾ ಪಾರ್ಟಿ ವಿಜಯಪುರ ಜಿಲ್ಲೆಯ ಪಕ್ಷದ ಕಾರ್ಯಾಲಯದಲ್ಲಿ ಜಗದ್ಗುರು ಮಧ್ವಾಚಾರ್ಯರ, ಮಹಾತ್ಮಾ ಗಾಂದಿಜಿ ಹಾಗೂ ಲಾಲ ಬಹದ್ದೂರ ಶಾಸ್ತ್ರಿರವರ ಜಯಂತಿಯನ್ನು ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬೆಳಗಾವಿ ವಿಭಾಗ ಪ್ರಭಾರಿಗಳಾದ ಶ್ರೀ ಚಂದ್ರಶೇಖರ ಕವಟಗಿ ರವರು ಮಾತನಾಡಿ ಗಾಂಧೀಜಿ ಹಾಗೂ ಶಾಸ್ತ್ರೀಜಿರವರ ಜೀವನ, ಎದುರಾದ ಸವಾಲುಗಳು, ಅವರ ವ್ಯಕ್ತಿತ್ವದ ಬಗ್ಗೆ ವಿವರವಾಗಿ ಮಾತನಾಡಿದರು. ಲಾಲ್ ಬಹದ್ದೂರ್ ಶಾಸ್ತ್ರೀಜಿಯವರು ನಮಗೆ ಕಲಿಸಿಕೊಟ್ಟ ಪಾಠಗಳು ಹಲವು: ಸತ್ಯ, ಸರಳತೆ, ಪ್ರಾಮಾಣಿಕತೆ ಮತ್ತು ದೇಶಕ್ಕಾಗಿ ತ್ಯಾಗದ ಮಹತ್ವ. ಕೇವಲ ಐದೂವರೆ ಅಡಿ ಎತ್ತರದ ಈ ಪುಟ್ಟ ಮನುಷ್ಯ, ತನ್ನ ವ್ಯಕ್ತಿತ್ವ ಮತ್ತು ನಾಯಕತ್ವದಿಂದ ಹಿಮಾಲಯದಷ್ಟು ಎತ್ತರಕ್ಕೆ ಏರಿ ನಿಂತರು. ಅವರ ಆದರ್ಶಗಳನ್ನು ಅನುಸರಿಸುವ ಮೂಲಕ, ನಾವೆಲ್ಲರೂ ಒಂದು ಬಲಿಷ್ಠ, ಸ್ವಾಭಿಮಾನಿ ಮತ್ತು ಸಮೃದ್ಧ ಭಾರತವನ್ನು ನಿರ್ಮಿಸುವಲ್ಲಿ ನಮ್ಮ ಪಾಲನ್ನು ನಿರ್ವಹಿಸೋಣ ಎಂದರು.

ಜಿಲ್ಲಾ ಕಾರ್ಯದರ್ಶಿ ಗಳಾದ ಶ್ರೀ ಕೃಷ್ಣಾ ಗುನ್ನಾಳಕರ ಮಾತನಾಡಿ ಜಗದ್ಗುರುಮಧ್ವಾಚಾರ್ಯರ 787 ನೇ ಜಯಂತಿ ಆಚರಿಸಲಾಗುತ್ತಿದೆ. ದ್ವೈತ ವೇದಾಂತ ತತ್ವಶಾಸ್ತ್ರದ ಪ್ರಮುಖ ಪ್ರತಿಪಾದಕರು. ಹಿಂದೂ ಪಂಚಾಂಗದ ಪ್ರಕಾರ, ಇವರ ಜಯಂತಿಯನ್ನು ಸಾಮಾನ್ಯವಾಗಿ ಆಶ್ವಯುಜ ಶುಕ್ಲ ಪಕ್ಷದ ದಶಮಿ ತಿಥಿಯಂದು, ಅಂದರೆ ವಿಜಯದಶಮಿಯ ದಿನದಂದು ಆಚರಿಸಲಾಗುತ್ತದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಗುರುಲಿಂಗಪ್ಪ ಅಂಗಡಿ, ಸಂಸದರಾದ ರಮೇಶ ಜಿಗಜಿಣಗಿ, ಮಾಜಿ ಸಚಿವರಾದ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ವಿ.ಪ ಸದಸ್ಯರಾದ ಅರುಣ ಶಹಾಪೂರ, ಉಮೇಶ ಕಾರಜೋಳ, ಭೀಮಾಶಂಕರ ಹದನೂರ, ಗೋಪಾಲ ಘಟಕಾಂಬಳೆ,ಸಂಜಯಪಾಟೀಲ ಕನಮಡಿ, ಉಮೇಶ ಕೋಳಕೂರ, ಮಳುಗೌಡ ಪಾಟೀಲ, ಈರಣ್ಣ ರಾವೂರ, ಶಿವರುದ್ರ ಬಾಗಲಕೋಟ, ವಿಜಯ ಜೋಶಿ, ಪಾಪುಸಿಂಗ ರಜಪೂತ, ಶರಣಬಸು ಕುಂಬಾರ, ಚಿನ್ನು ಚಿನಗುಂಡಿ, ವಿಜಯ ಹಿರೇಮಠ, ಮಲ್ಲು ಕಲಾದಗಿ ಹಣಮಂತ ಭಜಂತ್ರಿ & ಪಕ್ಷದ ವಿವಿಧ ಸ್ಥರದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# 2025ನೇ ಸಾಲಿನ “ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ”ಕ್ಕೆ ಇತಿಹಾಸಕಾರ, ಲೇಖಕ ಡಾ. ರಾಮಚಂದ್ರ ಗುಹಾ ಆಯ್ಕೆ



**ಬೆಂಗಳೂರು:** ಪ್ರಸಿದ್ಧ ಭಾರತೀಯ ಇತಿಹಾಸಕಾರ, ಅಂಕಣಕಾರ ಮತ್ತು ಚಿಂತಕರಾದ ಡಾ. ರಾಮಚಂದ್ರ ಗುಹಾ ಅವರನ್ನು 2025ನೇ ಸಾಲಿನ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕಕ್ಕೆ ಕರ್ನಾಟಕ ಸರ್ಕಾರ ಆಯ್ಕೆ ಮಾಡಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪ್ರತಿ ವರ್ಷ ನೀಡಲಾಗುವ ಈ ಗೌರವಾನ್ವಿತ ಪ್ರಶಸ್ತಿಯನ್ನು, ಗಾಂಧೀಜಿಯವರ ಜೀವನ ಮೌಲ್ಯಗಳನ್ನು ಸಮಾಜದಲ್ಲಿ ಹರಡಲು ಮಹತ್ತರ ಕೊಡುಗೆ ನೀಡಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಪ್ರದಾನ ಮಾಡಲಾಗುತ್ತದೆ.

ರಾಷ್ಟ್ರಪಿತಮಹಾತ್ಮಗಾಂಧೀಜಿಜಯಂತಿಯನ್ನು ರಾಜ್ಯಾದ್ಯಂತ ಅರ್ಥಪೂರ್ಣವಾಗಿ, ಜನಸಾಮಾನ್ಯರು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಆಚರಿಸಲು ರಾಜ್ಯ ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಆಚರಣೆಯ ಅಂಗವಾಗಿ ಗಾಂಧೀಜಿಯವರ ತತ್ವ, ಮೌಲ್ಯ ಹಾಗೂ ಸಮಾಜಮುಖಿ ಚಿಂತನೆಗಳನ್ನು ಜನಮನಗಳಲ್ಲಿ ಬಿತ್ತುವಲ್ಲಿ ಮಹತ್ವದ ಪಾತ್ರವಹಿಸಿರುವ ಡಾ. ರಾಮಚಂದ್ರ ಗುಹಾ ಅವರನ್ನು ಈ ವರ್ಷದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಡಾ. ಗುಹಾ ಅವರು ಭಾರತದ ಸಮಕಾಲೀನ ಇತಿಹಾಸ, ರಾಜಕೀಯ ಚಳವಳಿಗಳು, ಪರಿಸರ ಹೋರಾಟಗಳು ಹಾಗೂ ಕ್ರಿಕೆಟ್ ಕುರಿತ ತಮ್ಮ ಅಧ್ಯಯನ ಮತ್ತು ಗ್ರಂಥ ರಚನೆಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ.

**ಅವರ ಪ್ರಮುಖ ಕೃತಿಗಳು:**

India After Gandhi (ಸ್ವಾತಂತ್ರ್ಯ ನಂತರ ಭಾರತದ ಇತಿಹಾಸ)

A Corner of a Foreign Field (ಭಾರತೀಯ ಕ್ರಿಕೆಟ್ನ ಸಾಮಾಜಿಕ ಇತಿಹಾಸ)

Gandhi Before India (ಮಹಾತ್ಮ ಗಾಂಧೀಜಿಯವರ ಜೀವನಚರಿತ್ರೆಯ ಮೊದಲ ಭಾಗ)

Gandhi: The Years That Changed the World (ಜೀವನಚರಿತ್ರೆಯ ಎರಡನೇ ಭಾಗ)

The Unquiet Woods (ತಳಸ್ಥರದ ಪರಿಸರ ಚಳವಳಿಗಳ ಅಧ್ಯಯನ)

ಈ ಕೃತಿಗಳು ಇತಿಹಾಸ ಅಧ್ಯಯನವನ್ನು ಶ್ರೀಮಂತಗೊಳಿಸುವುದಷ್ಟೇ ಅಲ್ಲದೆ, ಸಾಮಾನ್ಯ ಓದುಗರಿಗೂ ಸುಲಭವಾಗಿ ತಲುಪುವ ಶೈಲಿಯಲ್ಲಿ ಬರೆದಿರುವುದರಿಂದ ಸಮಾಜದಲ್ಲಿ ಚಿಂತನ?ಮನನಕ್ಕೆ ಪ್ರೇರಣೆಯಾಗಿವೆ. ವಿಶೇಷವಾಗಿ ಗಾಂಧೀ ತತ್ವಗಳನ್ನು ಆಳವಾಗಿ ವಿಶ್ಲೇಷಿಸಿ ಅವನ್ನು ಸಮಕಾಲೀನ ಭಾರತಕ್ಕೆ ಸಂಬಂಧಿಸಿದಂತೆ ಅರ್ಥೈಸುವಲ್ಲಿ ಡಾ. ಗುಹಾ ಅವರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರ ಗಾಂಧೀಜಿಯವರ ಎರಡು ಸಂಪುಟಗಳ ಜೀವನಚರಿತ್ರೆ ಕನ್ನಡ ಸೇರಿದಂತೆ ಅನೇಕ **ಭಾಷೆಗಳಿಗೆ ಅನುವಾದಗೊಂಡಿದೆ.**

ರಾಜ್ಯ ಸರ್ಕಾರವು ಈ ಪ್ರಶಸ್ತಿಯ ಮೂಲಕ ಯುವ ಪೀಳಿಗೆಗೆ ಗಾಂಧೀಜಿಯವರ ಆದರ್ಶಗಳನ್ನು ಪರಿಚಯಿಸಿ, ಸತ್ಯ, ಅಹಿಂಸೆ, ಶಾಂತಿ ಮತ್ತು ಸೇವಾ ಮನೋಭಾವನೆಗಳನ್ನು ಬಲಪಡಿಸಲು ಬದ್ಧವಾಗಿದೆ. ಡಾ. ರಾಮಚಂದ್ರ ಗುಹಾ ಅವರಿಗೆ ಈ ಪ್ರಶಸ್ತಿ ಪ್ರದಾನವಾಗುವುದು, ಸಮಾಜದಲ್ಲಿ ಗಾಂಧೀಜಿಯವರ ಆದರ್ಶಗಳ ಪ್ರಚುರತೆ, ಸಂವಾದ ಮತ್ತು ಅಧ್ಯಯನಕ್ಕೆ ಪ್ರೇರಣೆಯಾದಂತಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ಕಾರಿ ಹುದ್ದೆ ಭರ್ತಿಗೆ ಯುವಕರ ಆಗ್ರಹ



**ವಿಜಯಪುರ :** ಖಾಲಿಯಿರುವ ಸರ್ಕಾರಿ ಉದ್ಯೋಗಕ್ಕೆ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ತಿನಿಂದ ನಗರದಲ್ಲಿ ಮಂಗಳವಾರ ಯುವಜನನಾಕ್ರೋಶ ಹೋರಾಟ ನಡೆಯಿತು.

ನಗರದ ಗಾಂಧಿ ಚೌಕಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ನಡೆದ ರ್ಯಾಲಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡು, ಉದ್ಯೋಗ ನೇಮಕಾತಿಗೆ ಆಗ್ರಹಿಸಿದರು.

ಡಿವಿಪಿ ರಾಜ್ಯ ಘಟಕದ ಅಧ್ಯಕ್ಷ ಶ್ರೀನಾಥ ಪೂಜಾರಿ ಮಾತನಾಡಿ, ನಾಡಿನಾದ್ಯಂತ ವಿದ್ಯಾರ್ಥಿ ಯುವಜನರ ನಿರುದ್ಯೋಗದ ಸಮಸ್ಯೆ ತೀವ್ರವಾಗಿದೆ. ಹಿಂದಿನ ಬಿಜೆಪಿ, ಈಗಿನ ಕಾಂಗ್ರೆಸ್ ಸರ್ಕಾರ ಸೇರಿದಂತೆ ನಾಲ್ಕು ವರ್ಷದಿಂದ ಯಾವುದೇ ಸರ್ಕಾರಿ ಹುದ್ದೆಗಳನ್ನು ತುಂಬದೇ ಸತಾಯಿಸುತ್ತಿರುವುದು ಖಂಡನೀಯ ಎಂದರು.

ವಿದ್ಯಾರ್ಥಿ, ಯುವ ಜನರು ನೌಕರಿ ಪಡೆಯಬೇಕೆನ್ನುವ ಉದ್ದೇಶದಿಂದ ಹಗಲು ರಾತ್ರಿ ಕಷ್ಟಪಟ್ಟು ಶ್ರಮಪಡುತ್ತಿದ್ದಾರೆ. ಆದರೆ, ಸರ್ಕಾರ ಅವರ ಕಷ್ಟಕ್ಕೆ ಪ್ರತಿಫಲವಾಗಿ ಉದ್ಯೋಗ ನೀಡದೆ ಅವರ ಜೀವನವನ್ನು ಹಾಳು ಮಾಡುತ್ತಿರುವುದು ಖಂಡನೀಯ ಎಂದರು.

ಹೋರಾಟದ ಸ್ಥಳಕ್ಕೆ ಭೇಟಿ ನೀಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಧಿಕಾರಿ ಲಕ್ಷ್ಮಣ ನಿಂಬರಗಿ ಮನವಿ ಸ್ವೀಕರಿಸಿದರು.

ದಲಿತ ವಿದ್ಯಾರ್ಥಿ ಪರಿಷತ್ತಿನ ಮುಖಂಡರಾದ ಹುಚ್ಚಪ್ಪ ಸಿಂದಗಿ, ಮಂಜುನಾಥ, ಉಪಾಧ್ಯಕ್ಷ ಮಾದೇಶ ಚಲವಾದಿ, ಪ್ರತಾಪ ತೋಳನೂರ, ಪ್ರಶಾಂತ ದಾಂಡೇಕರ, ರಾಹುಲ ಕಳಸದ, ಯಮನೂರಿ ಮಾದರ, ಭೀಮು, ಮಂಜುನಾಥ ಎಲ್., ಶಿಲ್ಪಾ ಮುಂತಾದವರು ಭಾಗವಹಿಸಿದ್ದರು.

# ಪ್ರಚೋದಿತ ಹೋರಾಟ: ಪಾಟೀಲ ಹೇಳಿಕೆಗೆ ಖಂಡನೆ

**ವಿಜಯಪುರ :** ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ ಕೈಗೊಂಡಿರುವ ಅನಿರ್ಧಿಷ್ಟಾವಧಿ ಹೋರಾಟ ಯಾವೊಬ್ಬ ರಾಜಕಾರಣಿಯ ಪರವೂ ಅಲ್ಲ. ಯಾವೊಬ್ಬ ರಾಜಕಾರಣಿಯ ವಿರುದ್ದವೂ ಅಲ್ಲ. ಅಂತೆಯೇ, ಯಾವುದೇ ಪಕ್ಷದ ಪರವೂ ಅಲ್ಲ, ವಿರುದ್ದವೂ ಅಲ್ಲ. ಇದು ಇಡೀ ಜಿಲ್ಲೆಯ ಜನರಪರವಾಗಿ ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳು ಒಂದಾಗಿ ನಡೆಸುತ್ತಿರುವ ಹೋರಾಟವಾಗಿದೆ ಎಂಬುದನ್ನು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಗಮನಿಸಬೇಕು ಎಂದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಹೋರಾಟ ಸಮಿತಿ ಮನವಿ ಮಾಡಿದೆ.

ಹೋರಾಟಗಾರರಿಗೆ ಕನಿಷ್ಠ ಪ್ರಜ್ಞೆಯೂ ಇಲ್ಲ, ಪಿಪಿಪಿ ಬಗ್ಗೆ ತಿಳಿವಳಿಕೆ ಇಲ್ಲ, ಯಾರದೋ ಪ್ರಚೋದನೆಯಿಂದ ಕುಳಿತಿದ್ದಾರೆ' ಎಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಚಿವರು ಹಗುರವಾಗಿ ಮಾತನಾಡಿರುವುದನ್ನು ಹೋರಾಟ ಸಮಿತಿಯು ಒಪ್ಪಿಕೊಳ್ಳುವುದಿಲ್ಲ, ಅಷ್ಟೇ ಅಲ್ಲ ಅವರ ಇಂತಹ ಮಾತುಗಳನ್ನು ಸಮಿತಿಯು ತೀವ್ರವಾಗಿ ಖಂಡಿಸುತ್ತದೆ ಎಂದು ತಿಳಿಸಿದೆ.

ಜನಪ್ರತಿನಿಧಿಗಳಾಗಿರುವ ಅದರಲ್ಲೂ ಒಂದು ಸರ್ಕಾರವನ್ನು ಪ್ರತಿನಿಧಿಸುವ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿರುವ ಅವರು ಹೀಗೆ ಹಗುರವಾಗಿ ಮಾತನಾಡುವುದು ಅವರಿಗೆ ಶೋಭೆ ತರುವುದಿಲ್ಲ. ಅವರ ಇಂತಹ ಮಾತುಗಳು ಜನರ ಬಗ್ಗೆ ಮತ್ತು ಈ ಹಿಂದೆ ಸಮಾಜಕ್ಕೆ ಹಾಗೂ ದೇಶಕ್ಕಾಗಿ ಹೋರಾಡಿದ ಸಮಸ್ತ ಹೋರಾಟಗಾರರಿಗೆ ಅಗೌರವ ತೋರಿಸಿದಂತಾಗುತ್ತದೆ' ಎಂದು ಹೋರಾಟ ಸಮಿತಿ ಹೇಳಿದೆ.



ನಮ್ಮ ಹೋರಾಟದಲ್ಲಿ ಯಾವುದೇ ಇತಿಮಿತಿಗಳಿದ್ದಲ್ಲಿ ಪ್ರಾಮಾಣಿಕವಾಗಿ ನಾವು ತಿದ್ದಿಕೊಳ್ಳಲು ತಯಾರಿದ್ದೇವೆ. ನಮ್ಮ ತಪ್ಪುಗಳನ್ನು ತೋರಿಸಿ, ತಿದ್ದಿ ಜಿಲ್ಲೆಯ ಜನರ ಹಿತಾಸಕ್ತಿಗಾಗಿ ನಡೆಯುತ್ತಿರುವ ಹೋರಾಟವನ್ನು ಇನ್ನಷ್ಟು ಗಟ್ಟಿಗೊಳಿಸಬೇಕು' ಎಂದು ಮನವಿ ಮಾಡುತ್ತೇವೆ ಎಂದು ಸಮಿತಿ ತಿಳಿಸಿದೆ.

ಜಿಲ್ಲೆಯ ಜನತೆ ಮತ್ತು ಹೋರಾಟಗಾರರು ರಾಜಕಾರಣಿಗಳ ಇಂತಹ ಮಾತಿಗೆ ತಲೆ ಕೆಡೆಸಿಕೊಳ್ಳದೆ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭವಾಗುವವರೆಗೂ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ. ಹೋಬಳಿ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲೂ ವಿಸ್ತಾರಗೊಳಿಸಲು ಹೋರಾಟ ಸಮಿತಿ ನಿರ್ಧರಿಸಿದೆ' ಎಂದು ಹೇಳಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ಧರಣಿ ಸ್ಥಳಕ್ಕೆ ಬಂದು ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟಕ್ಕೆ ನನ್ನ ಬೆಂಬಲವಿದೆ. ನಾನೂ ಸರ್ಕಾರಿ ವೈದ್ಯಕೀಯ ಕಾಲೇಜು ಪರವಾಗಿದ್ದೇನೆ. ಇದರ ಸ್ಥಾಪನೆಗೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಸುವೆ. ಜನಗಳ ಭಾವನೆಯನ್ನೂ ತಿಳಿಸುವೆ ಎಂದು ಹೇಳಿರುವುದು ಹೋರಾಟ ಸಮಿತಿಯು ಸ್ವಾಗತಿಸುತ್ತದೆ ಮತ್ತು ಈ ನಿಟ್ಟಿನಲ್ಲಿ ಅವರು ಆದಷ್ಟು ಬೇಗ ಕಾರ್ಯಪ್ರವೃತ್ತರಾಗಬೇಕು' ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದೆ.

13 ನೇ ದಿನದ ಹೋರಾಟದಲ್ಲಿ ವಿನಾಯಕ ಐಬಾಳ, ಬಾಬು ಬಿಜಾಪುರ, ಮೀರಸಾಬ ದಳವಾಯಿ, ಪೀರಸಾಬ ವಾಲೀಕರ, ಅವಿನಾಶ ಐಹೊಳೆ, ಹೋರಾಟ ಸಮಿತಿ ಸದಸ್ಯರಾದ ಅರವಿಂದ ಕುಲಕರ್ಣಿ, ಭಗವಾನ್ ರೆಡ್ಡಿ, ಅಪ್ಪಸಾಹೇಬ ಯರನಾಳ, ಅನಿಲ ಹೊಸಮನಿ, ಲಲಿತಾ ಬಿಜ್ಜರಗಿ, ವಿದ್ಯಾವತಿ ಅಂಕಲಗಿ, ಸುರೇಶ ಬಿಜಾಪುರ, ಸುರೇಶ್ ಜೀಬಿ, ಲಕ್ಷ್ಮಣ ಹಂದ್ರಾಳ, ಶ್ರೀನಾಥ ಪೂಜಾರಿ, ಮಲ್ಲಿಕಾರ್ಜುನ ಬಟಗಿ, ಸಿದ್ದಲಿಂಗ ಬಾಗೇವಾಡಿ, ಭರತಕುಮಾರ ಎಚ್. ಟಿ, ಅಬ್ದುಲ ರಹಮಾನ್ ನಾಸಿರ್, ಜ್ಯೋತಿ ಮಿಣಜಗಿ, ಸಿದ್ದರಾಮ ಹಳ್ಳೂರ, ಜಯದೇವ ಸೂರ್ಯವಂಶಿ, ಬೋಗೇಶ್ ಸೋಲಾಪುರ್, ಗೀತಾ ಎಚ್, ಕಾವೇರಿ ರಜಪೂತ, ನೀಲಾಂಬಿಕಾ ಬಿರಾದರ ಭಾಗವಹಿಸಿದ್ದರು.

# ಗಂಗಾಧರ ಕೋರಳ್ಳಿ ಮಹಾಶಕ್ತಿ ಮಂದಿರದಲ್ಲಿ ಅನ್ನ ಪ್ರಸಾದ

**ವಿಜಯಪುರ :** ನಗರದ ಇಂಡಿ ರಸ್ತೆಯಲ್ಲಿರುವ ಗೋಕಾಕ ಚಳುವಳಿ ಹೋರಾಟಗಾರ ಗಂಗಾಧರ ಕೋರಳ್ಳಿ ಪ್ರತಿಷ್ಠಾಪಿತ ಮಹಾಶಕ್ತಿ ನಾಡದೇವಿ ಮಂದಿರದಲ್ಲಿ ನವರಾತ್ರಿ ಪ್ರಯುಕ್ತ ಮಂಗಳವಾರ ಭಕ್ತಾದಿಗಳು ಹಾಗೂ ಸಾರ್ವಜನಿಕರಿಗೆ ಅನ್ನ ದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಈ ಸಂದರ್ಭದಲ್ಲಿ ನೀಲಕಂಠ ಕೋರಳ್ಳಿ,
ಮಹಾದೇವಿ ಕೋರಳ್ಳಿ, ವೀಣಾ ಕೋರಳ್ಳಿ ಆದಿತ್ಯ ಕೋರಳ್ಳಿ, ಗಂಗಾಬಾಯಿ ಮನಗೂಳಿ, ತ್ರಿವೇಣಿ ಮನಗೂಳಿ,
ಸವಿತಾ ಬಿರಾದಾರ, ನಿಹಾರಿಕಾ ಮಂಟಾಳೆ, ಶಾಂತಾಬಾಯಿ ಬಿದರಿ, ಹಣಮಂತ ಕಲಾದಗಿ, ಶೋಭಾ ಪಾಟೀಲ, ಉಮಾ ಇಟ್ಟಂಗಿ, ಕವಿತಾ ಪ್ಯಾಟಿ ಎಚ್ ಜಿ ವಾಲಿ, ರಾಜೇಂದ್ರ, ಗುರು ಹಿರೇಮಠ, ಸಂಗು ಹಿರೇಮಠ, ಭೀಮರಾಯ ಕುಂಟೋಜಿ, ಕಲ್ಲಪ್ಪ ಶಿವಶರಣ, ಕನ್ನಡದ ಕಟ್ಟಾಳು ಗಂಗಾಧರ ಕೋರಳ್ಳಿ ಪ್ರತಿಷ್ಠಾನದ ಕಾರ್ಯದರ್ಶಿ ಲಾಯಪ್ಪ ಇಂಗಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು

# ಜಂಬೂಸವಾರಿಯಲ್ಲಿ ಹೆಜ್ಜೆಮೇಳ:ಉ.ಕರ್ನಾಟಕದ ಗ್ರಾಮೀಣ ಜಾನಪದ ಕಲೆ ಪರಿಚಯಿಸಲಿರುವ ತಂಡ

**ಮುದ್ದೇಬಿಹಾಳ :** ತಾಲ್ಲೂಕಿನ ಹೆಜ್ಜೆಮೇಳ ತಂಡವು ಈ ಬಾರಿಯ ಮೈಸೂರು ದಸರಾ ಜಂಬೂ ಸವಾರಿಯ ಮೆರವಣಿಗೆಯಲ್ಲಿ ಹೆಜ್ಜೆ ಹಾಕಲಿದ್ದು, ಉತ್ತರ ಕರ್ನಾಟಕ ಭಾಗದ ಗ್ರಾಮೀಣ ಜಾನಪದ ಕಲೆಯನ್ನು ನಾಡಿಗೆ ಪರಿಚಯಿಸಲಿದೆ.

ತಾಲ್ಲೂಕಿನ ಯರಝುರಿಯ ಜಾನಪದ ಹೆಜ್ಜೆಮೇಳ ಸಂಘವು ಅಕ್ಟೋಬರ್ 2ರಂದು ವಿಶ್ವವಿಖ್ಯಾತ ದಸರಾದಲ್ಲಿ ಜಂಬೂ ಸವಾರಿ ಮಹೋತ್ಸವ ಭಾಗಿಯಾಗಲಿದೆ. ಸಂಘಕ್ಕೆ ಮೈಸೂರು ದಸರಾ ಪಂಜಿನ ಕವಾಯತು ಉಪ ಸಮಿತಿಯ ಉಪ ಅಧಿಕಾರಿ ಸೀಮಾ ಲಾಟ್ಕರ್ ಆಹ್ವಾನ ನೀಡಿದ್ದಾರೆ.

ಹೆಜ್ಜೆ ಮೇಳದ ವಿಶೇಷತೆ: 'ಹಲಗೆ ವಾದನ, ಸಾಂಪ್ರದಾಯಿಕ ವಾದ್ಯಗಳ ಮೂಲಕ ಒಟ್ಟು 22 ಜನರ ತಂಡ ಮೇಳದಲ್ಲಿ ಇರಲಿದೆ. ಯರಝುರಿ ಗ್ರಾಮದವರೇ ಈ ಮೇಳದಲ್ಲಿರುವುದು ವಿಶೇಷ. 10 ವರ್ಷಗಳಿಂದ ನಮ್ಮ ತಂಡ ಹಲವೆಡೆ ಪ್ರದರ್ಶನ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ' ಎಂದು ಹೆಜ್ಜೆ ಮೇಳದ ತಂಡದ ಅಧ್ಯಕ್ಷ ಭೀಮಸೇನ ಕೋಳೂರು ತಿಳಿಸಿದರು.



ಮೇಳದ ಧಿರಿಸು: 'ಅಪ್ಪಟ ಉತ್ತರ ಕರ್ನಾಟಕ ಭಾಗದ ಉಡುಪನ್ನು ಹೆಜ್ಜೆಮೇಳದ ಕಲಾವಿದರು ಧರಿಸುತ್ತಾರೆ.

ತಲೆಗೆ ರೇಶ್ಮೆ ಪಟಗ, ಬಿಳಿ ಧೋತ್ರ, ಅಂಗಿ ಧರಿಸುತ್ತಾರೆ.

ಕೈಯಲ್ಲಿ ಕೋಲುಗಳನ್ನು ಹಿಡಿದು ಹಲಗೆಯ ತಾಳಬದ್ದ ನಿನಾದಕ್ಕೆ ಹೆಜ್ಜೆ ಹಾಕುತ್ತಾರೆ' ಎಂದರು.

ಮರೆಯಾಗುತ್ತಿರುವ ಗ್ರಾಮೀಣ ಕಲೆಗಳನ್ನು ಉಳಿಸುವುದಕ್ಕೆ ಕನ್ನಡ ಜಾನಪದ ಪರಿಷತ್, ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ಹಲವು ಸಾಹಿತ್ಯಿಕ ಸಂಘಟನೆಗಳು ಶ್ರಮಿಸುತ್ತಿವೆ.

ಯರಝುರಿಯ ಹೆಜ್ಜೆಮೇಳವು ಮೈಸೂರು ದಸರಾ ಮೆರವಣಿಗೆಯಲ್ಲಿ ಪ್ರದರ್ಶನವಾಗುತ್ತಿರುವುದು ತಾಲ್ಲೂಕಿನ ಗೌರವವನ್ನು ಇಮ್ಮಡಿಸಿಗೊಳಿಸಿದಂತಾಗಿದೆ' ಎಂದು ಹೇಳಿದರು.

## ಕಜಾಪ ಮಹಿಳಾ ಘಟಕದ ತಾಲೂಕು ಮಟ್ಟದ ಜಾನಪದ ಮಹಿಳಾ ಸಮ್ಮೇಳನದ ಲೋಗೋ ಬಿಡುಗಡೆ

# ಮಹಿಳಾ ಸಮ್ಮೇಳನ ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ: ತಿಮ್ಮಾಪೂರ

**ಲೋಕಾಪುರ :** ರಾಜ್ಯದಲ್ಲಿ ಪ್ರಥಮ ಬಾರಿಗೆ ಮಹಿಳೆಯರು ನಶಿಸಿ ಹೋಗುತ್ತಿರುವ ಜಾನಪದ ಕಲೆಯನ್ನು ಉಳಿಸಲು ತಾಲೂಕು ಮಟ್ಟದ ಜಾನಪದ ಮಹಿಳಾ ಸಮ್ಮೇಳನ ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿ ಎಂದು ಅಬಕಾರಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.



ಪಟ್ಟಣದ ನಿರೀಕ್ಷಣಾ ಮಂದಿರದಲ್ಲಿ ಕಜಾಪ ನೂತನ ಮಹಿಳಾ ಘಟಕದ ವತಿಯಿಂದ ಆಯೋಜಿಸಿದ ತಾಲೂಕು ಕನ್ನಡ ಜಾನಪದ ಮಹಿಳಾ ಸಮ್ಮೇಳನ–2025ರ ಲೋಗೋ ಬಿಡುಗಡೆಗೊಳಿಸಿ ಮಾತನಾಡಿದ ಅವರು ಲೋಕಾಪುರ ಭಾಗದಲ್ಲಿ ಬಹಳಷ್ಟು ಕಲಾವಿದರು ಇರುವುದುರಿಂದ ಇದನ್ನು ಕಲೆಗಳ ಬೀಡು ಎನ್ನುತ್ತಾರೆ. ಇದೊಂದು ಅದ್ಭುತ ಕಾರ್ಯಕ್ರಮ ಹೀಗಾಗಿ ಜನಪದವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಜಾಪ ಮಹಿಳಾ ಘಟಕದ ಸಂಘಟನೆಗೆ ನಾವು ಯಾವಾಗಲು ಜೊತೆಯಾಗಿರುತ್ತೇವೆ. ಮಹಿಳೆ ಅಬಲೆ ಅಲ್ಲ ಅವಳು ಸಬಲೆ, ಸಮಾಜದಲ್ಲಿ ಮಹಿಳೆಯರನ್ನು ಗೌರವಿಸಬೇಕು, ಉನ್ನತ ಮಟ್ಟದ ಸ್ಥಾನ ನೀಡುವುದರ ಜೊತೆಗೆ ಅವರ ಎಲ್ಲ ಸಮಾಜಮುಖಿ ಕೆಲಸಗಳಿಗೆ ಬೆಂಬಲ ನೀಡುವುದು ಅವಶ್ಯವಾಗಿದೆ. ಜಾನಪದ ಕಲೆಗಳ ಉಳಿವು ಮತ್ತು ಬೆಳವಣಿಗೆಗೆ ಸರ್ಕಾರದಿಂದ ನೀಡಲಾಗುತ್ತಿರುವ ಬೆಂಬಲದ ಬಗ್ಗೆ ಚರ್ಚಿಸಿದರು.

ಜಿಲ್ಲಾ ಬಿಡಿಸಿಸಿ ಮಾಜಿ ಉಪಾಧ್ಯಕ್ಷ ಶಿವಾನಂದ ಉದಪುಡಿ ಮಾತನಾಡಿ ಲೋಕಾಪುರ ಭಾಗದಲ್ಲಿ ಮಹಿಳೆಯರು ಸಂಘಟಕರಾಗಿ ಅದ್ದೂರಿಯಾಗಿ ಮಹಿಳಾ ಸಮ್ಮೇಳನ ಮಾಡುತ್ತಿರುವದು ಹೆಮ್ಮೆಯ ಸಂಗತಿ, ಲೋಕಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹಿರಿಯರು, ಮುಖಂಡರು, ಮಹಿಳೆಯರು, ಯುವಕರು, ಮಕ್ಕಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಮ್ಮೇಳನದ ಮೆರವಣಿಗೆ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ನಿವೃತ್ತ ಶಿಕ್ಷಕ ಚಂದ್ರಕಾಂತ ರಂಗನ್ನವರ ಮಾತನಾಡಿ ಜಾನಪದ ಎಂಬುದು ವಿಶೇಷವಾಗಿದ್ದು, ಇವತ್ತಿನ ದಿನಮಾನದಲ್ಲಿ ಜಾನಪದ ಕಲೆಗಳು ಮಾಯವಾಗುತ್ತಿವೆ. ಬೀಸುಕಲ್ಲು ಪದ, ಹಂತಿಪದಗಳು, ಡೊಳ್ಳಿನ ಪದ, ಗೀಗಿ ಪದ, ಹೀಗೆ ಅನೇಕ ಸಂಪ್ರದಾಯ ಹಾಡುಗಳು ಮಾಯವಾಗುತ್ತಿವೆ. ಅದನ್ನು ಯುವ ಪಿಳಿಗೆಗೆ ಪರಿಚಯಿಸುವಂತಹ ಕೆಲಸ ಮಾಡಬೇಕಿದೆ. ಈ ನಿಟ್ಟಿನಲ್ಲಿ ಜಾನಪದ ಮಹಿಳಾ ಸಂಘಟನೆಯವರು ತಾಲುಕು ಮಟ್ಟದ ಜಾನಪದ ಮಹಿಳಾ ಸಮ್ಮೇಳನವನ್ನು ಹಮ್ಮಿಕೊಂಡಿದ್ದಾರೆ. ಇದು ಭವ್ಯ ಮೆರವಣಿಗೆ, ಕಲಾ ತಂಡಗಳೊಂದಿಗೆ ಮತ್ತು ಕುಂಬಮೇಳ ಆರತಿಯೊಂದಿಗೆ ಹಾಗೂ ಇನ್ನಿತರ ಜಾನಪದ ಕಲಾ ತಂಡಗಳೊಂದಿಗೆ ಈಡಿ ದಿನ ಜಾನಪದ ಕಲೆಗಳನ್ನು ಬಿಂಬಿಸುವಂತಹ ವಿಶೇಷ ಕಾರ್ಯಕ್ರಮ ನಡೆಯಲಿದೆ. ಎಂದು ಹೇಳಿದರು.

> **ಜಾನಪದ ಸಾಹಿತ್ಯದಲ್ಲಿ ನಮ್ಮ ನಾಡಿನ ಸಂಸ್ಕೃತಿ ಸಂಪ್ರದಾಯ ಅಡಗಿದೆ. ಪ್ರತಿಯೊಬ್ಬರು ಕಲಾವಿದರಿಗೆ ಗೌರವ ನೀಡುವದರ ಜೊತೆಗೆ ಗ್ರಾಮೀಣ ಭಾಗದ ಜಾನಪದ ಕಲೆಯನ್ನು ಬೆಳೆಸಿ ಉಳಿಸಲು ಮುಂದಾಗಬೇಕು.**
>
> । ಶಿವಾನಂದ ಉದಪುಡಿ
> **ಜಿಲ್ಲಾ ಬಿಡಿಸಿಸಿ ಮಾಜಿ ಉಪಾಧ್ಯಕ್ಷ**

ಕಜಾಪ ವಲಯ ಘಟಕದ ಮಹಿಳಾ ಅಧ್ಯಕ್ಷೆ ರೇಖಾ ನರಹಟ್ಟಿ ಮಾತನಾಡಿ ಜಾನಪದ ಕಲೆಯನ್ನು ಉಳಿಸಿ ಬೆಳೆಸು ನಿಟ್ಟಿನಲ್ಲಿ ತಾಲುಕು ಮಟ್ಟದ ಮಹಿಳಾ ಜಾನಪದ ಸಮ್ಮೇಳನ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದು ಹೇಳಿದರು.

ಈ ವೇಳೆ ಲೋಕಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ, ಮುಧೋಳಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸದುಗೌ ಪಾಟೀಲ, ಲೋಕಾಪುರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭೀಮನಗೌಡ ಪಾಟೀಲ, ಕಸಾಪ ವಲಯ ಘಟಕದ ಅಧ್ಯಕ್ಷ ಎಸ್. ಎಂ. ರಾಮದುರ್ಗ, ಆನಂದ ಹಿರೇಮಠ, ಗೋವಿಂದ ಕೌಲಗಿ, ರೆಹಮಾನ ತೊರಗಲ್, ಮಹೇಶ ಪೂಜಾರಿ, ಸಮ್ಮೇಳನದ ಸರ್ವಾಧ್ಯಕ್ಷರಾದ ನಾಡೋಜ ಪ್ರಶಸ್ತಿ ಪುರಸ್ಕೃತೆ ಯಲ್ಲವ್ವ ರೊಡ್ಡಪ್ಪನವರ, ಕಜಾಪ ವಲಯ ಘಟಕದ ಮಹಿಳಾ ಅಧ್ಯಕ್ಷೆ ರೇಖಾ ನರಹಟ್ಟಿ, ಶಕುಂತಲಾ ಹುಲ್ಲನ್ನವರ, ಮಹಾದೇವಿ ಮುತ್ತಿನಮಠ, ರಾಜೇಶ್ವರಿ ಮೋದಿ, ಕವಿತಾ ಮುದಕವಿ, ಸುಧಾ ಗಸ್ತಿ, ಸವಿತಾ ಗಂಗಾವತಿ, ತುಂಗವ್ವ ಪಾಟೀಲ, ಶಾರದಾ ಲಿಂಗದಮಠ, ಗೀತಾ ಹಲಕಿ, ಸುರೇಖಾ ಹಟ್ಟಿ, ನಿವೇದಿತಾ ಕಾಂಬಳೆ, ಗಿರಿಜಾ ಅಂಗಡಿ ಸೇರಿದಂತೆ ಅನೇಕ ಜನಪ್ರತಿನಿಧಿಗಳು, ಕಾರ್ಯಕರ್ತರು ಮತ್ತು ಸಾರ್ವಜನಿಕರು ಇದ್ದರು.

## ವಿವಿಧ ಕ್ಷೇತ್ರಗಳ ಸಾಧಕರಿಗೆ ಬೀದಿ ವ್ಯಾಪಾರಿಗಳ ಸಂಘದಿಂದ ಸೇವಾರತ್ನ ಪ್ರಶಸ್ತಿ ಪ್ರದಾನ



**ಕಲಬುರಗಿ:** ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12ಜನ ಸಾಧಕರಿಗೆ ಕರ್ನಾಟಕ ರಾಜ್ಯ ಬೀದಿ ವ್ಯಾಪಾರಿಗಳ ಸಂಘ ರಾಜ್ಯಮಟ್ಟದ "ಸೇವಾ ರತ್ನ" ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಿದೆ.

ನಗರದ ಗಾಜಿಪೂರ ಅತ್ತರ್ ಕಂಪೌಂಡ ಬಳಿ ಇರುವ ಅಖಿಲ ಕರ್ನಾಟಕ ಬೀದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಜಗನ್ನಾಥ ಎಸ್.ಸೂರ್ಯವಂಶಿ ಅವರ ನಿವಾಸದಲ್ಲಿ ಆಯೋಜಿಸಿದ್ದ ನಾಡಹಬ್ಬ ನವರಾತ್ರಿ ದಸರಾ ಉತ್ಸವ ಮತ್ತು ವಿವಿಧ ಕ್ಷೇತ್ರಗಳ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿದ ಶಾಸಕ ಅಲ್ಲಮಪ್ರಭು ಪಾಟೀಲ್ ಮತ್ತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನೀಲಕಂಠರಾವ ಮೂಲಗೆ ಅವರು, ಸಾಧಕರಿಗೆ ಸೇವಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಬೀದಿವ್ಯಾಪಾರಿಗಳ ಸಂಘದ ಅಧ್ಯಕ್ಷ ಜಗನ್ನಾಥ ಸೂರ್ಯವಂಶಿ ಅವರು, ಪ್ರತಿವರ್ಷ ವಿವಿಧ ಸಾಧಕರನ್ನು ಗುರುತಿಸಿ ಅವರನ್ನು ಸನ್ಮಾನಿಸುವ ಕೆಲಸವನ್ನು ಸಂಘ ಮಾಡುತ್ತಿದ್ದಲ್ಲದೇ ಬೀದಿವ್ಯಾಪಾರಿಗಳ ಸಮಸ್ಯೆಗಳಿಗೆ ಧ್ವನಿಯನ್ನು ನಿರಂತರವಾಗಿ ಎತ್ತಲಾಗುತ್ತಿದೆ ಎಂದರು.

ಎಂಎಲ್‌ಸಿ ಶಶೀಲ ನಮೋಶಿ, ಹಿರಿಯ ಪತ್ರಕರ್ತ ಭವಾನಿಸಿಂಗ್ ಠಾಕೂರ, ಮಹಾದೇವಪ್ಪ ನೀಲಕೂಡ ಹಿರಿಯ ನ್ಯಾಯವಾದಿ ಗುರುರಾಜ ತಿಳಗುಳ ವೇದಿಕಯ ಮೇಲಿದ್ದರು.

ಕಾರ್ಯಕ್ರಮದಲ್ಲಿ ನ್ಯಾಯವಾದಿ ಕೆ.ಎ.ಕಲಬುರಗಿ, ಹಣಮಂತ ವಾಡೇಕರ್, ಗಣೇಶ ವಳಖೇರಿ, ಶರಣಕುಮಾರ ಭಜಂತ್ರಿ ಹಾಗರಗಾ, ಶೇಳ್ಳಗಿ ದೇವಿಂದ್ರ, ಚಂದ್ರಶೇಖರ ಪಾಟಿಲ, ರಾಘು ಕೋಗನೂರ, ವೀರ ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷ ಅಮೃತ ಸಿ.ಪಾಟೀಲ ಸಿರನೂರ, ಸಾಧಕರಾದ ನವಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ದಯಾನಂದ ಪಾಟೀಲ, ಈರಣ್ಣ ಪಟ್ಟೇದಾರ, ರೇವಣಸಿದ್ದಪ್ಪ ಮಟ್ಟಿ, ಜಮೀರ ಅಹ್ಮದ ಪಟ್ಟೆದಾರ, ಬಾಬುರಾವ ಸಂಗೇಪಾಗ್, ದತ್ತಾ ಮಂಗ್ನಾಲೆ ಸೋಲಾಪೂರ, ಛಾಯಗ್ರಾಹಕ ಮಂಜುನಾಥ ಜಮಾದಾರ, ಕಲಬುರಗಿ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಲೂಯಿಸ್ ಕೋರಿ, ಜೈಕನ್ನಡಿಗರ ಸೇನೆ ರಾಜ್ಯಾಧ್ಯಕ್ಷ ಡಾ.ದತ್ತು ಎಚ್.ಭಾಸಗಿ, ಚಂದ್ರಶೇಖರ ಮಾಡಿವಾಳ, ಮಲ್ಲಿಕಾರ್ಜುನ ಸಾರವಾಡ, ಶಿವಯೋಗಿ ಅಳ್ಳೊಳಿ, ರೋಹಿತ ಮಂಗನೂರ, ಶಂಭುಲಿಂಗ ಮತ್ತು ಹಿರಿಯ ಪತ್ರಕರ್ತ ಹಟ್ಟಿ ನಜೀರ ಮಿಯಾನ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ವೀರಕನ್ನಡಿಗರ ಸೇನೆ ಅಧ್ಯಕ್ಷ ಅಮೃತ ಸಿ.ಪಾಟೀಲ ಸಿರನೂರು ಕಾರ್ಯಕ್ರಮ ನಡೆಸಿಕೊಟ್ಟರು, ಜೈಕನ್ನಡಿಗರ ಸೇನೆ ಅಧ್ಯಕ್ಷ ದತ್ತು ಎಚ್.ಭಾಸಗಿ ವಂದನಾರ್ಪಣೆ ಮಾಡಿದರು.

# ಕೊಲ್ಹಾರ ಪಟ್ಟಣದ ಬ್ಯಾಂಕ್ ಲಾಕರ್ ಭದ್ರತೆ ಪರಿಶೀಲಿಸಿದ ಪೊಲೀಸರು

**ಕೊಲ್ಹಾರ :** ಪಟ್ಟಣದ ಬ್ಯಾಂಕ್‌ಗಳಲ್ಲಿನ ಲಾಕರ್‌ಗಳ ಭದ್ರತೆ, ಸಿಸಿಟಿವಿ ನಿರ್ವಹಣೆ, ಎಟಿಎಂಗಳ ಸುರಕ್ಷತೆ ಸೇರಿದಂತೆ ಆಯಾ ಬ್ಯಾಂಕ್‌ಗಳಲ್ಲಿ ಕೈಗೊಳ್ಳಲಾಗಿರುವ ಭದ್ರತಾ ಕ್ರಮಗಳನ್ನು ಪರಿಶೀಲಿಸಲು ಕೊಲ್ಹಾರ ಪೊಲೀಸ್ ಠಾಣೆ ಮುಂದಾಗಿದೆ.



ಪಟ್ಟಣದ ವಿವಿಧ ಬ್ಯಾಂಕ್‌ಗಳಿಗೆ ಪೊಲೀಸ್ ತಂಡ ಭೇಟಿ ನೀಡಿ ಭದ್ರತೆ ಪರಿಶೀಲಿಸುತ್ತಿದೆ. ಬ್ಯಾಂಕ್‌ಗಳ ಲಾಕರ್ ವ್ಯವಸ್ಥೆ, ಸಿಸಿಟಿವಿ ಕ್ಯಾಮರಾ ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಪೊಲೀಸರು ಸ್ವತಃ ಪರಿಶೀಲಿಸಿದರು. ಅಲ್ಲದೆ ಬ್ಯಾಂಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಅಪರಾಧ ವಿಭಾಗದ ಪಿಎಸ್‌ಐ ರೇಣುಕಾ ಹಳ್ಳಿ ಸಭೆ ನಡೆಸಿ ಸೂಕ್ತ ಮಾಹಿತಿ ನೀಡಿದರು. ಕೆಲವು ಬ್ಯಾಂಕ್‌ಗಳಲ್ಲಿ ಸಿಸಿಟಿವಿ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದು, ಇದ್ದರೂ ದೃಶ್ಯ ಸ್ಫಟಿಕವಾಗಿ ಕಾಣಿಸದಿರುವಂತಹ ಲೋಪಗಳನ್ನು ಗಮನಿಸಿ, ಅವನ್ನು ತಕ್ಷಣ ಸರಿಪಡಿಸಲು ಪೊಲೀಸರ ತಂಡ ಸೂಚನೆ ನೀಡಿದೆ. ಈ ಪರಿಶೀಲನೆ ವೇಳೆ ಎ.ಎಸ್.ಐ. ಶಿವಾಜಿ ಪವಾರ್, ಎ.ಎಸ್.ಐ. ಬಿ.ಎ. ನಿಡೋಣಿ, ಗೋಕಾವಿ ಹಾಜರಿದ್ದರು.

# ಸಾಲಬಾಧೆ: ವ್ಯಕ್ತಿ ಆತ್ಮಹತ್ಯೆ

**ಕಲಬುರಗಿ:** ಸಾಲಬಾಧೆ ತಾಳದೆ ನೀರಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಸವಪಟ್ಟಣದಲ್ಲಿ ನಡೆದಿದೆ.

ಮರೆಪ್ಪ ತಂದೆ ಸೈಬಣ್ಣ ಬರ್ಮಾ (48) ಆತ್ಮಹತ್ಯೆ ಮಾಡಿಕೊಂಡವರು.

ಫರಹತಾಬಾದನ ಬ್ಯಾಂಕ್ ಆಫ್ ಬರೋಡಾದಲ್ಲಿ 3.73 ಲಕ್ಷ, ಖಾಸಗಿಯಾಗಿ 13 ರಿಂದ 14 ಲಕ್ಷ ಮತ್ತು ತಂದೆಯ ಹೆಸರಿನಲ್ಲಿರುವ ಜಮೀನಿನ ಮೇಲೆ ಬ್ಯಾಂಕಿನಲ್ಲಿ 4.25 ಲಕ್ಷ ಸಾಲವಾಗಿತ್ತು. ಕಳೆದ 2–3 ವರ್ಷಗಳಿಂದ ಭೀಮಾ ನದಿ ನೀರಿನಿಂದ ಬೆಳೆ ಹಾನಿಯಾಗಿತ್ತು. ಈ ವರ್ಷವೂ ಸಹ ಬಿತ್ತನೆ ಮಾಡಿದ್ದ ಹತ್ತಿ ಬೆಳೆ ಹಾಳಾಗಿತ್ತು.

ಇದರಿಂದಾಗಿ ಸಾಲ ತೀರಿಸುವುದು ಹೇಗೆ ಎಂಬ ಚಿಂತೆಯಲ್ಲಿ ಗ್ರಾಮದ ಮರೆಮ್ಮ ದೇವಸ್ಥಾನ ಹೋಗುವ ರಸ್ತೆಯಲ್ಲಿ ನೀರಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಸಂಬಂಧ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State